CC-O. In Public Domain. Digitized by eGangotri

ಶ್ರೀಸುರೇಶ್ವರಾಚಾರ್ಯರು



ಲ.ನ.ಶಾಸ್ತ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

546

ಶ್ರೀ ಸುರೇಶ್ವರಾಚಾರ್ಯರು

ಲ. ನ. ಶಾಸ್ತ್ರೀ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

SRI SURESWARACHARYARU—a life sketch of Sri Sureswaracharya written in Kannada by L. N. Shastri and Published by G. K. Ananthram for IBH Prakashana Gandhinagar Bangalore 560 009.

© by the Publisher 1984

ಬೆಲೆ : ರೂ. 2-00

ಚಿತ್ರಗಳು : ಎಸ್. ಆರ್. ಸ್ವಾಮಿ

ಮೊದಲ ಮುದ್ರಣ : 1984. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸುರೇಶ್ವರಾಚಾರ್ಯರು

1

ಭಾವೈಕ್ಯತೆ, ಭಾವೈಕ್ಯತೆ ಎಂಬ ಮಾತನ್ನು ನೀವು ಪದೇ ಪದೇ ಕೇಳುತ್ತಿರುತ್ತೀರಿ, ಓದಿರುತ್ತೀರಿ. ಈ ಭಾವೈಕ್ಯತೆ ಎಂಬ ಪದಕ್ಕೆ, ಮಾತಿಗೆ ಏನು ಅರ್ಥ ?

ನಮ್ಮ ಭಾರತ ದೇಶವು ಬಹು ವಿಶಾಲವಾದುದು. ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಹಿಮಾಲಯದವರೆಗೆ ವಿಶಾಲವಾಗಿ ಹರಡಿಕೊಂಡಿದೆ. ಪೂರ್ವ ಪಶ್ಚಿಮವಾಗಿಯೂ ಅಷ್ಟೆ, ಆನೆಯಂತೆ ಮೈ ಚಾಚಿಕೊಂಡು ಮಲಗಿದೆ. ಈ ದೇಶದ ನದಿ ನದಗಳು, ಗಿರಿ ಪರ್ವತಗಳು, ವನ ಕಾನನಗಳು ತಮ್ಮದೇ ಆದ ಪಾವಿತ್ರ್ಯವನ್ನು ಹೊಂದಿವೆ. ಯಾವ ಸ್ಥಳವನ್ನೇ ನೋಡಿ, ಅದು ರಾಮಾಯಣದ ಮಹಾಪುರುಷರಿಗೋ, ಭಾರತದ ಮಹನೀಯರಿಗೋ, ಭಾಗವತದ ಪುಣ್ಯಾತ್ಮರಿಗೋ ಸಂಬಂಧವನ್ನು ಹೊಂದಿರುತ್ತದೆ. ಉತ್ತರ ಭಾಗದಲ್ಲಿ ಇರುವವರು ದಕ್ಷಿಣದ ತುತ್ತತುದಿಯಲ್ಲಿ ಇರುವ ರಾಮೇಶ್ವರದ ದರ್ಶನಕ್ಕಾಗಿ ಹಾತೊರೆಯುತ್ತಾರೆ. ದಕ್ಷಿಣದವರಾದರೋ ಉತ್ತರದ ಕಾಶಿ, ಬದರೀ ಕ್ಷೇತ್ರಗಳ ದರ್ಶನ ಮಾಡಬೇಕೆಂದು ಬಯಸುತ್ತಾರೆ. ಹೀಗೆ ಈ ದೇಶದ ಪುಣ್ಯ ಕ್ಷೇತ್ರಗಳು ಜನಗಳನ್ನು ತಮ್ಮತ್ತ ಸದಾ ಆಕರ್ಷಿಸುತ್ತವೆ.

ನಮ್ಮ ಭಾರತ ದೇಶದಲ್ಲಿ ಇರುವಷ್ಟು ಭಾಷೆಗಳು ಪ್ರಪಂಚದ ಇನ್ನಾವ ದೇಶದಲ್ಲಿಯೂ ಇಲ್ಲ. ದಕ್ಷಿಣ ದೇಶದ ಭಾಷೆಗಳಿಗೂ,

Sri Vidyabharathi Book Centre, Shringeri

CC-O. In Public Domain. Digitized by eGangotri

ಉತ್ತರ ದೇಶದ ಭಾಷೆಗಳಿಗೂ ತುಂಬಾ ವ್ಯತ್ಯಾಸವಿದೆ. ಪೂರ್ವ ದೇಶದ ಭಾಷೆಗಳಿಗೂ, ಪಶ್ಚಿಮ ದೇಶದ ಭಾಷೆಗಳಿಗೂ ವ್ಯತ್ಯಾಸ ತುಂಬಾ ಇದೆ. ಆದರೆ ಈ ಎಲ್ಲ ಜನಗಳ ಜೀವನ, ನಂಬಿಕೆಗಳು, ಆಶೋತ್ತರಗಳು ಇವುಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ವೇದಗಳು, ಶಾಸ್ತ್ರಗಳು, ಪುರಾಣಗಳು ಇವು ಈ ಎಲ್ಲರಿಗೂ ಸಮಾನವಾದ ಪೂಜ್ಯವಾದ ಗ್ರಂಥಗಳಾಗಿವೆ. ನಾವು ಕೇರಳದಲ್ಲೇ ಇರಲಿ, ಕಾಶ್ಮೀರದಲ್ಲಿಯೇ ಇರಲಿ ನಾವೆಲ್ಲರೂ ಭಾರತೀಯರು. ನಾವೆಲ್ಲರೂ ಒಂದೇ ದೇಶದ ಜನ, ಒಂದೇ ಧರ್ಮಕ್ಕೆ ಸೇರಿದವರು. ನಮ್ಮ ಉಡಿಗೆ ತೊಡಿಗೆಗಳಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದು. ನಮ್ಮ ಭಾಷೆಗಳಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದು. ಆದರೆ ನಾವೆಲ್ಲರೂ ಭಾರತೀಯರು, ಭಾರತಮಾತೆಯ ಮಕ್ಕಳು, ಸೋದರರು ಎಂಬ ಭಾವನೆ ನಮ್ಮಲ್ಲಿ ದೃಢವಾಗಬೇಕು. ಇದೇ ಭಾವೈಕ್ಯತೆ. ಇಂತಹ ದೃಢವಾದ ಭಾವನೆ ನಮ್ಮಲ್ಲಿ ಬೇರೂರಿದರೆ, ನಾವು ಐಕಮತ್ಯದಿಂದ ಇರಬಹುದು. ಪರಸ್ಪರ ಸಹಾಯ ಸಹಕಾರಗಳಿಂದ ದೇಶವನ್ನು ಏಳಿಗೆಗೆ ತರಬಹುದು. ಸುಖ ಶಾಂತಿಗಳನ್ನು ನೆಲೆಗೊಳಿಸಬಹುದು.

ಇಂತಹ ಭಾವೈಕ್ಯತೆಯನ್ನು ಸಾವಿರಾರು ವರ್ಷಗಳ ಹಿಂದೆಯೇ ಶ್ರೀ ಶಂಕರಾಚಾರ್ಯರು ಮೂಡಿಸಿದ್ದರು ಎಂದರೆ ನಿಮಗೆ ವಿಸ್ಮಯವಾಗಬಹುದಲ್ಲವೇ ?

ಶ್ರೀ ಶಂಕರರು ಈ ದೇಶದಲ್ಲಿ ಧಾರ್ಮಿಕ ಏಕತೆಯನ್ನು ಮೂಡಿಸಲು ಮಠಗಳನ್ನು ಸ್ಥಾಪಿಸಿದರು. ಅದಕ್ಕಾಗಿ ಅವರು ನಾಲ್ಕು ಸ್ಥಳಗಳನ್ನು ಆರಿಸಿದರು. ಅವುಗಳಲ್ಲಿ ಎರಡು ಪರ್ವತಗಳ ಮೇಲೂ ಎರಡು ಸಮುದ್ರತೀರದಲ್ಲಿಯೂ ಇದ್ದವು. ದಕ್ಷಿಣದಲ್ಲಿ ಶೃಂಗೇರಿಯಲ್ಲಿ, ಉತ್ತರದಲ್ಲಿ ಬದರೀನಾಥದಲ್ಲಿ, ಪೂರ್ವಕ್ಕೆ ಪುರೀಕ್ಷೇತ್ರದಲ್ಲಿ, ಪಶ್ಚಿಮಕ್ಕೆ ದ್ವಾರಕೆಯಲ್ಲಿ ಅವರು ಮಠಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri



ಭಾವೈಕ್ಯತೆ—ಭಾರತದ ಭವ್ಯಮಂತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥಾಪಿಸಿದರು. ಧಾರ್ಮಿಕವಾಗಿ ಭರತಖಂಡವೆಲ್ಲ ಒಂದು ಎಂಬು ದನ್ನು ಅವರು ಈ ರೀತಿ ತೋರಿಸಿಕೊಟ್ಟರು.

ಅಷ್ಟೇ ಅಲ್ಲ, ಈ ಮಠಗಳಿಗೆ ಅವರು ನೇಮಕ ಮಾಡಿದ ಅಧ್ಯಕ್ಷರು ಯಾರು ? ಆಯಾ ಸ್ಥಳದವರೇ ? ಅಲ್ಲ. ಉತ್ತರದ ಬದರೀ ಪೀಠಕ್ಕೆ ಕರ್ನಾಟಕದ ಶ್ರೀ ತ್ರೋಟಕಾಚಾರ್ಯರನ್ನು ನೇಮಿ ಸಿದರು. ಪೂರ್ವದಿಕ್ಕಿನ ಪುರೀ ಗೋವರ್ಧನ ಪೀಠಕ್ಕೆ ತಮಿಳು ದೇಶದ ಶ್ರೀ ಪದ್ಮಪಾದರನ್ನು ಆರಿಸಿದರು. ಪಶ್ಚಿಮದ ದ್ವಾರಕಾ ಪೀಠಕ್ಕೆ ಕರ್ನಾಟಕದ ಶ್ರೀ ಹಸ್ತಾಮಲಕರನ್ನು ನೇಮಿಸಿದರು. ದಕ್ಷಿಣದ ಶೃಂಗೇರಿಯ ಶ್ರೀ ಶಾರದಾ ಪೀಠಕ್ಕೆ ಉತ್ತರ ದೇಶದವ ರಾದ ಶ್ರೀ ಸುರೇಶ್ವರಾಚಾರ್ಯರನ್ನು ಆರಿಸಿದರು. ಈ ದೇಶವು ರಾಜಕೀಯವಾಗಿ ಐಕ್ಯತೆಯನ್ನು ಪಡೆಯುವ ಮೊದಲೇ ಶ್ರೀ ಶಂಕರರು ಧಾರ್ಮಿಕವಾಗಿ ಭಾರತ ದೇಶವೆಲ್ಲಾ ಒಂದೇ ಎಂಬುದನ್ನು ಸಾರಿ, ದಕ್ಷಿಣ ಉತ್ತರದ ಜನ ಒಂದೇ ಎಂಬುದನ್ನು ತೋರಿಸಿ ಕೊಟ್ಟರು.

ಶ್ರೀ ಶಂಕರಾಚಾರ್ಯರು ತೋರಿಸಿದ ಶ್ರೇಷ್ಠ ಧ್ಯೇಯ, ಆದರ್ಶಗಳನ್ನು ಒಪ್ಪಿಕೊಂಡು, ಅದರಂತೆಯೇ ತಮ್ಮ ಜೀವನ ವನ್ನು ನಡೆಸಿದ ಮಹಾನುಭಾವರೇ ಶ್ರೀ ಸುರೇಶ್ವರಾಚಾರ್ಯರು.

2

ಶ್ರೀ ಸುರೇಶ್ವರ ಎಂಬುದು ಅವರು ಸನ್ಯಾಸ ತೆಗೆದುಕೊಂಡ ನಂತರ ಬಂದ ಹೆಸರು. ಅದಕ್ಕೆ ಮೊದಲು ಅವರ ಹೆಸರು ವಿಶ್ವ ರೂಪ ಎಂದಿತ್ತು. ಮಂಡನಮಿಶ್ರ ಎಂದೂ ಜನ ಅವರನ್ನು ಕರೆ ಯುತ್ತಿದ್ದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ವಿಶ್ವರೂಪರು ಹುಟ್ಟಿದ ಸ್ಥಳ ಮಧ್ಯಪ್ರದೇಶದ ಮಾಹಿಷ್ಮತೀ ನಗರ, ನರ್ಮದಾನದಿತೀರದಲ್ಲಿದೆ. ಈಗ ಅದಕ್ಕೆ ಮಾಂಧಾತಾ ಎಂಬ ಹೆಸರಿದೆ. ಅಲ್ಲಿ ಅದೇ ಹೆಸರಿನ ತೊರೆಯೊಂದು ಹರಿಯುತ್ತಿದೆ. ಅದು ನರ್ಮದೆಯನ್ನು ಸೇರಿಕೊಳ್ಳುತ್ತದೆ.

ಮಾಹಿಷ್ಮತಿ ತುಂಬಾ ವಿದ್ಯಾವಂತರಿದ್ದ ನಗರ. ಅಲ್ಲಿ ಹಿಮಮಿಶ್ರ ಎಂಬ ಪ್ರಖ್ಯಾತರಾದ ವಿದ್ವಾಂಸರು ಇದ್ದರು. ಅವರು ಮೊದಲಿಗೆ ಮಿಥಿಲಾ ನಗರಕ್ಕೆ ಸೇರಿದವರಾಗಿದ್ದು, ಅನಂತರ ಮಾಹಿಷ್ಮತಿಗೆ ಬಂದು ನೆಲೆಸಿದ್ದರು. ಅವರು ಯಜುರ್ವೇದದ ಶುಕ್ಲ ಶಾಖೆಗೆ ಸೇರಿದವರು. ಉಳಿದ ವೇದಗಳನ್ನೂ ಓದಿದ್ದವರು. ಅನೇಕ ಶಾಸ್ತ್ರಗಳನ್ನು ಓದಿದ್ದ ಹಿಮಮಿಶ್ರರು ವಿಶೇಷವಾಗಿ ಪೂರ್ವ ಮೀಮಾಂಸಾ ಶಾಸ್ತ್ರದಲ್ಲಿ ದೊಡ್ಡ ಪಂಡಿತರೆಂದು ಪ್ರಸಿದ್ಧರಾಗಿದ್ದರು. ಅವರಲ್ಲಿ ವಿದ್ಯಾಭ್ಯಾಸ ಮಾಡಲು ದೂರ ದೂರದ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಅವರ ಮನೆಯೇ ಒಂದು ಪುಟ್ಟದಾದ ವಿಶ್ವವಿದ್ಯಾನಿಲಯದಂತೆ ಇತ್ತು. ಅವರು ಕುಲಪತಿಯಂತೆ ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದರು.

ಅವರ ಒಬ್ಬನೇ ಮಗ ವಿಶ್ವರೂಪರು. ತಮ್ಮ ಮಗನೂ ತಮ್ಮಂತೆಯೇ ದೊಡ್ಡ ವಿದ್ವಾಂಸನಾಗಬೇಕೆಂದು, ಹಿಮಮಿಶ್ರರ ಆಸೆಯಾಗಿತ್ತು. ಮೊದಲು ಶುಕ್ಲ ಯಜುರ್ವೇದ, ಕೃಷ್ಣ ಯಜುರ್ವೇದವನ್ನೂ ಮಗನಿಗೆ ಕಲಿಸಿದರು. ಅನಂತರ ಕ್ರಮವಾಗಿ ಋಗ್ವೇದ, ಸಾಮವೇದ, ಅಥರ್ವವೇದಗಳನ್ನೂ ಪಾಠ ಮಾಡಿಸಿದರು. ಅನಂತರ ವ್ಯಾಕರಣ, ತರ್ಕಶಾಸ್ತ್ರ ಮತ್ತು ಮೀಮಾಂಸಾ ಶಾಸ್ತ್ರಗಳನ್ನು ಕಲಿಸುವ ವ್ಯವಸ್ಥೆ ಮಾಡಿದರು.

ಹಿಮಮಿಶ್ರರು ತಮ್ಮ ಮಗನನ್ನು ಉನ್ನತ ವ್ಯಾಸಂಗಕ್ಕಾಗಿ

CC-O. In Public Domain. Digitized by eGangotri

ದೊಡ್ಡ ವಿದ್ವಾಂಸರಾಗಿದ್ದ ಆಚಾರ್ಯ ಕುಮಾರಿಲ ಭಟ್ಟರಲ್ಲಿ ಕಳು ಹಿಸಿದರು.

ಖ್ಯಾತ ವಿದ್ವಾಂಸರೆಂದು ಪ್ರಸಿದ್ಧರಾಗಿದ್ದ ಶ್ರೀ ಕುಮಾರಿಲ ಭಟ್ಟರು ಪ್ರಯಾಗದಲ್ಲಿ—ಈಗಿನ ಅಲಹಾಬಾದು–ದೊಡ್ಡ ಗುರು ಕುಲವನ್ನು ನಡೆಸುತ್ತಿದ್ದರು. ವೇದಗಳನ್ನೂ, ವೈದಿಕ ಕರ್ಮ ಗಳನ್ನೂ ಅಪಹಾಸ್ಯ ಮಾಡುತ್ತಿದ್ದ ಬೌದ್ಧರನ್ನು ಎದುರಿಸಿ ವೇದ ಗಳ ಹಿರಿಮೆಯನ್ನು ಎತ್ತಿ ತೋರಿಸಿದ್ದವರು ಕುಮಾರಿಲ ಭಟ್ಟರು. ಅವರು ಅನೇಕ ಯಜ್ಞಯಾಗಾದಿಗಳನ್ನು ಮಾಡಿದ್ದರು. ಹಗಲಿ ರುಳೂ ವೇದ ಧರ್ಮವನ್ನು ಕಾಪಾಡಲು ಶ್ರಮಪಡುತ್ತಿದ್ದರು. ತಮ್ಮಲ್ಲಿ ಬಂದ ವಿದ್ಯಾರ್ಥಿಗಳನ್ನು ಅವರು ಪ್ರೀತಿಯಿಂದ ಬರ ಮಾಡಿಕೊಂಡು ಪಾಠ ಹೇಳುತ್ತಿದ್ದರು.

ಇಂತಹ ಶ್ರೇಷ್ಠ ವಿದ್ವಾಂಸರನ್ನು ಅರಸಿಕೊಂಡು ವಿಶ್ವ ರೂಪರು ಬಂದರು. ಕುಮಾರಿಲ ಭಟ್ಟರ ಗುರುಕುಲ ದೊಡ್ಡದಾ ಗಿತ್ತು. ಅಲ್ಲಿ ಅಲಂಕಾರ ಶಾಸ್ತ್ರ, ವ್ಯಾಕರಣ, ತರ್ಕಶಾಸ್ತ್ರ ಮತ್ತು ಮೀಮಾಂಸಾ ಶಾಸ್ತ್ರಗಳು ಬೋಧಿಸಲ್ಪಡುತ್ತಿದ್ದವು. ವಿಶ್ವರೂಪರು ಈ ವಿಷಯಗಳೆಲ್ಲವನ್ನೂ ಮೊದಲೇ ಸ್ವಲ್ಪಮಟ್ಟಿಗೆ ಓದಿಕೊಂಡಿ ದ್ದರು. ಕುಮಾರಿಲ ಭಟ್ಟರಲ್ಲಿ ಈ ವಿಷಯಗಳನ್ನೇ ಕುರಿತು ಪ್ರೌಢ ವ್ಯಾಸಂಗ ಮಾಡಲಾರಂಭಿಸಿದರು.

ವಿಶ್ವರೂಪರು ಇತರ ವಿದ್ಯಾರ್ಥಿಗಳಂತೆ ಇರಲಿಲ್ಲ. ಅವರು ಸದಾ ಓದುತ್ತಿದ್ದುದಷ್ಟೇ ಅಲ್ಲ, ಓದಿದುದನ್ನು ಮನಸ್ಸಿನಲ್ಲೇ ಯೋಚಿಸುತ್ತಿದ್ದರು. ಅನುಮಾನಗಳನ್ನು ಬಗೆಹರಿಸಿಕೊಳ್ಳಲು, ಗುರುಗಳನ್ನು ಪದೇ ಪದೇ ಪ್ರಶ್ನೆ ಕೇಳುತ್ತಿದ್ದರು. ತುಂಬಾ ಸೂಕ್ಷ್ಮ ಬುದ್ಧಿಯುಳ್ಳ ಚತುರಮತಿ ಎಂದು ಹೆಸರಾದ ವಿಶ್ವ ರೂಪರು ತಮಗೆ ವಿದ್ಯಾದಾನ ಮಾಡಿದ ಗುರುಗಳಲ್ಲಿ ತುಂಬಾ ಗೌರವ ಹೊಂದಿದ್ದರು. ಅವರ ಸೇವೆಯಲ್ಲಿ ಗುರು ಪತ್ನಿಯ ಸೇವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಎಲ್ಲರಿಗೂ ಮೊದಲಿಗರಾಗುತ್ತಿದ್ದರು. ನಾಲ್ಕು ವೇದಗಳಲ್ಲಿ, ದರ್ಶನ ಶಾಸ್ತ್ರಗಳಲ್ಲಿ ವಿಶ್ವರೂಪರು ಪೂರ್ಣ ಪಂಡಿತರಾದರು. ತಮ್ಮ ಪಾಂಡಿತ್ಯದಿಂದ ಅವರು ವೇದಪುರುಷನಾದ ಬ್ರಹ್ಮನ ಅವತಾರವೇ ಎಂಬ ಹೆಸರನ್ನು ಪಡೆದರು.

ವಿದ್ಯಾಭ್ಯಾಸವು ಪೂರ್ತಿಯಾಯಿತು. ಕುಮಾರಿಲ ಭಟ್ಟರು, ವಿಶ್ವರೂಪರನ್ನು ಪ್ರೀತಿಯಿಂದ ಆಶೀರ್ವದಿಸಿ ಮಾಹಿಷ್ಮತಿಗೆ ಕಳುಹಿಸಿಕೊಟ್ಟರು.

3

ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯಲೆಂದು ಹೊರಟ ವಿಶ್ವರೂಪರು ಪೂರ್ಣ ವಿದ್ಯಾವಂತರಾಗಿ ಹಿಂದಿರುಗಿದ್ದು ತಂದೆ ಹಿಮಮಿಶ್ರರಿಗೆ ತುಂಬಾ ಸಂತೋಷ ಉಂಟುಮಾಡಿತು. ಇನ್ನು ಮಗನಿಗೆ ಮದುವೆ ಮಾಡಿ, ಮನೆಯ ಹೊಣೆಯನ್ನು ಆತನಿಗೆ ವಹಿಸಬೇಕು ಎಂದು ಅವರು ನಿರ್ಧರಿಸಿದರು.

ಹಿಮಮಿಶ್ರರಿಗೂ ವಯಸ್ಸಾಗಿತ್ತು. ವಿಶ್ರಾಂತಿ ಅಗತ್ಯವಾಗಿತ್ತು. ಮಗನು ಗುರುಕುಲದ ಹೊಣೆಯನ್ನು ವಹಿಸಿಕೊಂಡರೆ, ತಾವು ತಪಸ್ಸಿಗೆ ಹೊರಡಬಹುದು ಎಂದು ಅವರು ನಿರ್ಧರಿಸಿದರು.

ಮಗನು ಹಿಂದಿರುಗಿ ಬಂದು ಒಂದೆರಡು ತಿಂಗಳಾಗಿತ್ತು. ಒಂದು ದಿನ ಬೆಳಿಗ್ಗೆ, ವಿಶ್ವರೂಪರು ತಮ್ಮ ಸಂಧ್ಯಾವಂದನೆ, ಅಗ್ನಿಕಾರ್ಯ ಇವನ್ನು ಮುಗಿಸಿ, ತಂದೆಯನ್ನು ನಮಸ್ಕರಿಸಲು ಬಂದಾಗ ಹಿಮಮಿಶ್ರರು ಮದುವೆಯ ಮಾತನ್ನು ಎತ್ತಿದರು.

"ಮಗು, ನನಗೆ ವಯಸ್ಸಾಯಿತು. ಈ ಗುರುಕುಲವನ್ನು ನಡೆಸಲು ಈಗ ನೀನು ಸಮರ್ಥನಾಗಿದ್ದೀಯೆ. ನೀನು ವಿವಾಹ

Sri Vidyabharati Book Centre, Ringen

CC-O. In Public Domain. Digitized by eGangotri

ಮಾಡಿಕೊಂಡು ಗೃಹಸ್ಥನಾದರೆ ನಾನು ನಿಶ್ಚಿಂತೆಯಿಂದ ತಪಸ್ಸಿನಲ್ಲಿ ನಿರತನಾಗಬಹುದು" ಎಂದರು.

"ತಂದೆಯೇ ತಾವು ಇನ್ನಷ್ಟು ಕಾಲ ಇಲ್ಲಿಯೇ ಇದ್ದು, ನನಗೆ ಮಾರ್ಗ ತೋರಿಸಿಕೊಡಬೇಕು. ತಮಗೆ ಕಷ್ಟವಾಗದಂತೆ ನಾನು ತಮಗೆ ಸಹಾಯಕನಾಗಿ ಇರುವೆನು" ಎಂದರು ವಿಶ್ವರೂಪರು.

ಹಿಮಮಿಶ್ರರು "ಮಗು, ನನಗೆ ಎಲ್ಲ ಕೆಲಸಗಳಿಂದ ವಿಶ್ರಾಂತಿ ಪಡೆಯಬೇಕೆಂದು ಮನಸ್ಸಾಗಿದೆ. ನೀನು ವಿದ್ಯಾವಂತನಾಗಿದ್ದೀಯ. ಕೆಲಸವನ್ನು ವಹಿಸಿಕೋ. ನಿನಗೆ ಅಗತ್ಯವಾದಾಗ ನಾನು ನೆರವಿಗೆ ಇರುತ್ತೇನೆ" ಎಂದರು.

ವಿಶ್ವರೂಪರು "ತಂದೆಯೇ, ತಮ್ಮ ಅಪೇಕ್ಷೆಯಂತೆ ಗುರುಕುಲವನ್ನು ವಹಿಸಿಕೊಳ್ಳುತ್ತೇನೆ. ತಾವು ಹೇಳಿದಂತೆಯೇ ನಡೆಯುತ್ತೇನೆ" ಎಂದರು.

ಹಿಮಮಿಶ್ರರಿಗೆ ತಮ್ಮ ಸೊಸೆಯಾಗುವವಳು ಮಗನಂತೆಯೇ ವಿದ್ಯಾವತಿಯಾಗಿರಬೇಕು ಎಂಬ ಅಪೇಕ್ಷೆಯಿತ್ತು. ವಿಶ್ವರೂಪರಿಗೂ ತಮ್ಮ ಕೈಹಿಡಿಯುವಾಕೆ ವಿದ್ಯಾವಂತೆಯಾಗಿರಬೇಕು ಎಂಬ ಆಸೆಯಿತ್ತು. ಅದಕ್ಕೆ ತಕ್ಕಂತೆಯೇ ಅವರಿಗೆ ವಿದುಷಿಯಾದ ಪತ್ನಿಯೇ ದೊರಕಿದಳು.

ಬಹಳ ಹಿಂದೆ, ಕಾಶ್ಮೀರ ದೇಶದಿಂದ ಅನೇಕ ಜನ ಬ್ರಾಹ್ಮಣ ವಿದ್ವಾಂಸರು, ಇತರ ಸ್ಥಳಗಳಿಗೆ ವಲಸೆ ಹೋಗಿ ನೆಲಸಿದ್ದರು. ಹಾಗೆ ಬಂದು ಶೋಣಾ ನದೀ ತೀರದಲ್ಲಿ ನೆಲಸಿದವರು ವಿಷ್ಣು ಮಿಶ್ರರು. ಅವರು ಬಲು ದೊಡ್ಡ ಪಂಡಿತರಾಗಿದ್ದು ಆಗಿನ ಕಾಲದ ಪದ್ಧತಿಯಂತೆ ತಮ್ಮ ಮನೆಯಲ್ಲಿಯೇ ಗುರುಕುಲವನ್ನು ನಡೆಸುತ್ತಿದ್ದರು. ಅವರ ಮಗಳೇ ಉಭಯ ಭಾರತೀ.

Sri Vidyabharathi Book Centre, Sringeri

ಉಭಯ ಭಾರತಿಗೆ ಶಾರದಾ, ಅಂಬಾ ಎಂಬ ಹೆಸರುಗಳೂ

CC-O. In Public Domain. Digitized by eGangotri



"ಮಗು ನನಗೆ ವಯಸ್ಸಾಯಿತು, ಗುರುಕುಲವನ್ನು ನೀನೇ ನಡೆಸು"

Sri Vidyabharathi Book Centre, Sringeri

CC-O. In Public Domain. Digitized by eGangotri

ಇದ್ದವು. ವಿಷ್ಣು ಮಿಶ್ರರಿಗೆ ಗಂಡು ಮಕ್ಕಳು ಇರಲಿಲ್ಲ. ಉಭಯ ಭಾರತಿಯನ್ನೇ ಅವರು ಮಗನಂತೆ ಸಾಕಿದರು. ಕಾವ್ಯ, ನಾಟಕ, ಅಲಂಕಾರ ಶಾಸ್ತ್ರಗಳನ್ನು, ವೇದ ವೇದಾಂತ ಶಾಸ್ತ್ರಗಳನ್ನೂ ಅವರು ಆಕೆಗೆ ಪಾಠ ಮಾಡಿಸಿದರು. ಪೂರ್ವ ಮೀಮಾಂಸಾ ಮತ್ತು ಉತ್ತರ ಮೀಮಾಂಸಾ ಶಾಸ್ತ್ರಗಳಲ್ಲಿ ಆಕೆ ತುಂಬಾ ಪರಿಣತೆ ಯಾದಳು.

ಭಾರತೀ–ವಿಶ್ವರೂಪರ ವಿವಾಹ ಬಹಳ ವೈಭವದಿಂದ ನಡೆಯಿತು. ಹಿಮಮಿಶ್ರರೂ, ವಿಷ್ಣು ಮಿಶ್ರರೂ ಈ ಸಂಬಂಧದಿಂದ ಸಂತೋಷಪಟ್ಟರು.

ಈ ಮದುವೆಯಾಗಿ ಒಂದೆರಡು ತಿಂಗಳು ಕಳೆಯಿತು. ಉಭಯ ಭಾರತಿಯು ಮನೆಯ ಎಲ್ಲ ಒಳಕೆಲಸಗಳ ಪೂರ್ಣ ಹೊರೆಯನ್ನು ವಹಿಸಿಕೊಂಡಳು. ವಿಶ್ವರೂಪರು ತಂದೆಯ ಅಪ್ಪಣೆಯಂತೆ ತಾವು ಗುರುಕುಲದ ಹೊಣೆಯನ್ನು ವಹಿಸಿಕೊಂಡರು. ಹಿಮಮಿಶ್ರರು ಸ್ವಲ್ಪಕಾಲ ಅವರೊಡನೆಯೇ ಇದ್ದು ಅವರ ಎಲ್ಲ ಕೆಲಸಗಳನ್ನೂ ಗಮನಿಸಿದರು. ಅವರಿಗೆ ಸಮಾಧಾನವೂ ತೃಪ್ತಿಯೂ ಆಯಿತು. ಅವರು ಕಾಡಿಗೆ ಹೊರಡಲು ಸಿದ್ಧತೆ ಮಾಡಿಕೊಂಡರು.

ಒಂದು ದಿನ ಮಗನನ್ನು ಕರೆದು, "ಮಗು ನನಗೆ ಈಗ ಸಮಾಧಾನವಾಯಿತು. ಗುರುಕುಲದ ಕೆಲಸವನ್ನು ನೀನು ಸರಿಯಾಗಿ ನಡೆಸಿಕೊಂಡು ಹೋಗಲು ಸಮರ್ಥನಾಗಿದ್ದೀಯ. ನಾನು ತಪಸ್ಸಿಗೆ ಹೋಗುತ್ತೇನೆ. ವಿದ್ಯಾರ್ಥಿಗಳನ್ನು ನಿನ್ನ ಮಕ್ಕಳಂತೆ ನೋಡಿಕೋ. ಪಾಠ ಪ್ರವಚನಗಳಲ್ಲಿ ನಿನಗೆ ಸಹಾಯ ಮಾಡುವ ಇತರ ಉಪಾಧ್ಯಾಯರನ್ನು ಸ್ವಂತ ಸಹೋದರರಂತೆ ಕಾಣು" ಎಂದರು.

Sri Vidyabharathi Book Centre, Sringeri

ವಿಶ್ವರೂಪರು ತಲೆಬಾಗಿ, "ತಮ್ಮ ಅಪ್ಪಣೆಯಂತೆ ನಡೆಯುತ್ತೇನೆ" ಎಂದು ನುಡಿದರು.

CC-O. In Public Domain. Digitized by eGangotri

ಹಿಮಮಿಶ್ರರು ಸೊಸೆಯನ್ನು ಕರೆದು "ಮಗಳೇ, ಇದೋ ಈಗ ನಾನು ಹೊರಡುತ್ತಿದ್ದೇನೆ. ಬಹಳ ವರ್ಷಗಳಿಂದ ಈ ಅವ ಕಾಶಕ್ಕಾಗಿ ಕಾಯುತ್ತಿದ್ದೆ. ತಪಸ್ಸು ಮಾಡಬೇಕೆಂದು ಯೋಚಿಸು ತ್ತಿದ್ದೆ. ಈಗ ಸಮಯ ಬಂದಿದೆ. ಹೊರಡುತ್ತಿದ್ದೇನೆ. ಈ ಗುರು ಕುಲದ ಹೊಣೆ ನಿನ್ನ ಮೇಲೆ, ನಿನ್ನ ಪತಿಯ ಮೇಲೆ ಬಿದ್ದಿದೆ. ವಿದ್ಯಾರ್ಥಿಗಳನ್ನು ಮಕ್ಕಳಂತೆ ನೋಡಿಕೋ. ಅವರ ಆಹಾರ, ವಿಶ್ರಾಂತಿ ಆಟಪಾಠಗಳಲ್ಲಿ ಎಚ್ಚರಿಕೆಯಿಡು. ಆಳುಕಾಳುಗಳಲ್ಲಿ ದಯೆಯಿಂದ ವರ್ತಿಸು. ಗಂಡನಿಗೆ ಅನುಕೂಲೆಯಾಗಿ ನಡೆದುಕೋ" ಎಂದರು. ಆಕೆ ತಲೆಬಾಗಿ 'ಅಪ್ಪಣೆ' ಎಂದಳು.

ಹಿಮಮಿಶ್ರರ ಪಾದಗಳನ್ನು ಮುಟ್ಟಿ ಇಬ್ಬರೂ ನಮಸ್ಕರಿಸಿ ದರು. ಗುರುಕುಲದ ವಿದ್ಯಾರ್ಥಿಗಳೆಲ್ಲರೂ ಬಂದು ವಂದನೆ ಮಾಡಿ ದರು. ಹಿಮಮಿಶ್ರರು ಎಲ್ಲರನ್ನೂ ಆಶೀರ್ವದಿಸಿ ಕಾಡಿನತ್ತ ಪ್ರಯಾಣ ಹೊರಟರು.

ನದೀ ತೀರದವರೆಗೂ ಹಿರಿಯ ವಿದ್ಯಾರ್ಥಿಗಳೂ, ವಿಶ್ವ ರೂಪರೂ ಬಂದು ಅವರನ್ನು ಬೀಳ್ಕೊಟ್ಟರು.

4

ವೇದಗಳ ಪೂರ್ವಭಾಗಕ್ಕೆ ಕರ್ಮಕಾಂಡವೆಂದೂ, ಉತ್ತರ ಭಾಗಕ್ಕೆ ಜ್ಞಾನಕಾಂಡವೆಂದೂ ಹೆಸರು ಬಂದಿದೆ. ವೇದಗಳಲ್ಲಿ ಹೇಳಿ ರುವ ಯಜ್ಞ ಯಾಗಾದಿಗಳನ್ನು ಮಾಡಿಕೊಂಡು ಯೋಗ್ಯರಾದ ಶಿಷ್ಯರಿಗೆ ಪಾಠ ಹೇಳುವುದು ಆ ಕಾಲದಲ್ಲಿ ವಿಶೇಷವಾಗಿತ್ತು. ಪ್ರತಿಯೊಂದು ಗ್ರಾಮದಲ್ಲಿಯೂ ಒಂದೆರಡು ಬ್ರಾಹ್ಮಣರ ಮನೆ ಗಳು ಇರುತ್ತಿದ್ದವು. ಅವರು ನಿತ್ಯವೂ ಅಗ್ನಿಹೋತ್ರ, ಔಪಾಸನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇವುಗಳನ್ನು ಮಾಡುತ್ತಿದ್ದರು. ಸಣ್ಣಪುಟ್ಟ ಹೋಮಹವನಗಳನ್ನು ಆಗಾಗ ನಡೆಸುತ್ತಿದ್ದರು. ಅವರ ಮನೆಗಳಲ್ಲಿ ದೂರದಿಂದ ಬಂದ ವಿದ್ಯಾರ್ಥಿಗಳು ವೇದಶಾಸ್ತ್ರಗಳನ್ನು ಕಲಿಯುತ್ತಿದ್ದರು.

ತುಂಬಾ ಅನುಕೂಲವಂತರಾಗಿದ್ದವರು ದೊಡ್ಡ ಯಜ್ಞಗಳನ್ನು ನಡೆಸುತ್ತಿದ್ದರು. ಈ ಯಜ್ಞ ಯಾಗಗಳಲ್ಲಿ ಊರಿನ ಜನರೆಲ್ಲರೂ ಸೇರುತ್ತಿದ್ದರು. ಮಂತ್ರಗಳನ್ನು ಸಸ್ವರವಾಗಿ ಹೇಳುವವರು, ಯಜ್ಞಗಳಿಗೆ ಬೇರೆಯವರಿಂದ ಅಡ್ಡಿ ಬರದಂತೆ ತಡೆಯುವವರು, ಹೋಮಕ್ಕೆ ಮತ್ತು ಭೋಜನಕ್ಕೆ ಬೇಕಾದ ಸಾಮಗ್ರಿಯನ್ನು ತರುವವರು, ಹೋಮಕುಂಡದ ನಿರ್ಮಾಣ, ವಸತಿ ನಿರ್ಮಾಣ, ಜಲಾಶಯ ತಟಾಕಗಳ ನಿರ್ಮಾಣ ಹೀಗೆ ಊರಿನ ಸಮಾಜದ ಎಲ್ಲ ಜನರೂ ಯಜ್ಞಕಾರ್ಯದಲ್ಲಿ ಸೇರುತ್ತಿದ್ದರು.

ಈ ಯಜ್ಞ ಯಾಗಗಳಿಂದ ವಿದ್ವಾಂಸರಿಗೆ, ಕಲಾವಿದರಿಗೆ ಮನ್ನಣೆ ದೊರಕುತ್ತಿತ್ತು. ವೇದಶಾಸ್ತ್ರಗಳು, ಸಂಗೀತ, ಕಲೆ ಇವುಗಳಿಗೆ ಪ್ರೋತ್ಸಾಹ ದೊರಕುತ್ತಿತ್ತು. ಅನೇಕ ವಿಧವಾದ ದಾನ ಧರ್ಮಗಳು ನಡೆದು ಬಡಬಗ್ಗರಿಗೆ ತೃಪ್ತಿಯುಂಟಾಗುತ್ತಿತ್ತು. ಮಂತ್ರಪೂರ್ವಕವಾಗಿ ಮಾಡಿದ ಹೋಮದಿಂದ ಭೂಮಿಯು ಶುದ್ಧವಾಗುತ್ತಿತ್ತು. ಹೋಮದಿಂದ ಎದ್ದ ಹೊಗೆಯಿಂದ ನೀರು ಮತ್ತು ಗಾಳಿಯಲ್ಲಿ ಸೇರಿರುತ್ತಿದ್ದ ವಿಷಾಣುಗಳು ನಾಶವಾಗುತ್ತಿದ್ದವು.

ವಿಶ್ವರೂಪರು ಇಂತಹ ಅನೇಕ ಯಜ್ಞ ಯಾಗಗಳನ್ನು ನಡೆಸಿದರು. ಅನೇಕ ಜನ ವಿದ್ವಾಂಸರನ್ನು ಸನ್ಮಾನಿಸಿದರು. ಅನೇಕ ದಾನಧರ್ಮಗಳನ್ನು ಮಾಡಿದರು.

ವಿಶ್ವರೂಪರ ವಿದ್ಯೆ, ವಿನಯ, ಔದಾರ್ಯ ಇವುಗಳು ಸುತ್ತಮುತ್ತಲೂ ಹರಡಿ, ಬಹುಜನ ವಿದ್ಯಾರ್ಥಿಗಳು ಅವರಲ್ಲಿ ವಿದ್ಯೆ ಕಲಿಯಲು ಬಂದರು. ಅವರ ಮನೆ ಅರಮನೆಯಂತೆ ವಿಶಾಲವಾಗಿದ್ದು ಬಹಳ ಜನ ವಿದ್ಯಾರ್ಥಿಗಳಿಗೆ ಅದು ಆಶ್ರಯ ಸ್ಥಾನವಾಗಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶ್ವರೂಪರದು ಆದರ್ಶವಾದ ದಾಂಪತ್ಯವಾಗಿತ್ತು. ಅವರ ಪತ್ನಿಯೂ ಅವರಂತೆಯೇ ವಿದುಷಿ. ಅವರಂತೆಯೇ ವಿನಯ ವಂತಳಾಗಿದ್ದಳು. ಔದಾರ್ಯದಲ್ಲಿಯೂ ಆಕೆ ಅವರಿಗೆ ಸರಿಸಮ ಳಾಗಿದ್ದು, ಅವರಂತೆ ವಿದ್ಯಾರ್ಥಿಗಳಿಗೆ ತಾಯಿ ತಂದೆಯರಂತೆಯೇ ಇದ್ದರು.

ಉಭಯ ಭಾರತಿಯು ವಯಸ್ಸಿನಲ್ಲಿ ಇನ್ನೂ ಚಿಕ್ಕವರಾಗಿ ದ್ದರೂ ಮನೆಯ ವ್ಯವಸ್ಥೆಯನ್ನು ಬಲು ಅಚ್ಚುಕಟ್ಟಾಗಿ ಮಾಡು ತ್ತಿದ್ದರು. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ನೆರವು ನೀಡುತ್ತಿದ್ದರು. ಅವರ ಆರೋಗ್ಯಪಾಲನೆಯಲ್ಲಿ ಎಚ್ಚರಿಕೆ ವಹಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಆಹಾರ, ವಿಶ್ರಾಂತಿ, ಆಟ, ಪಾಠ ಮುಂತಾದವುಗಳಲ್ಲಿ ಆಕೆ ತುಂಬಾ ಗಮನವಿಟ್ಟಿದ್ದರು. ಈ ಕೆಲಸ ಗಳನ್ನು ಮನೆಯ ಆಳುಕಾಳುಗಳು, ಪರಿಚಾರಕರು ಮಾಡುತ್ತಿ ದ್ದರೂ ಉಭಯ ಭಾರತಿಯು ಇವೆಲ್ಲದರ ಮೇಲ್ವಿಚಾರಣೆಯನ್ನು ತಾನೇ ಸ್ವತಃ ನೋಡಿಕೊಳ್ಳುತ್ತಿದ್ದರು. ಪಾಕಶಾಲೆಗೆ ಹೋಗಿ ತಯಾರಾಗುತ್ತಿದ್ದ ಆಹಾರ ಶುದ್ಧವಾಗಿದೆಯೇ, ಪೌಷ್ಟಿಕವಾಗಿ ದೆಯೇ ಎಂದು ನೋಡುತ್ತಿದ್ದರು. ವಿದ್ಯಾರ್ಥಿಗಳು ಸರಿಯಾಗಿ ಊಟ ಮಾಡುತ್ತಿದ್ದಾರೆಯೇ ಎಂದು ಗಮನಿಸುತ್ತಿದ್ದರು.

ವಿಶ್ವರೂಪರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳೆಂದೇ ಎಣಿ ಸಿದ್ದರು. ಪಾಠ ಪ್ರವಚನಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪರೀಕ್ಷಿಸುತ್ತಿದ್ದರು. ಆತನಿಗೆ ಅರ್ಥವಾಗದ ಪಾಠವನ್ನು ತಾವೇ ಸ್ವತಃ ಹೇಳಿಕೊಡುತ್ತಿದ್ದರು. ಪ್ರತಿಯೊಬ್ಬ ವಿದ್ಯಾರ್ಥಿಯ ಬುದ್ಧಿ ಶಕ್ತಿಯನ್ನು ಪರೀಕ್ಷಿಸಿ ಅವರ ಅರ್ಹತೆಗೆ ತಕ್ಕಂತಹ ವಿಷಯವನ್ನು ಪಾಠ ಹೇಳುವಂತೆ ಏರ್ಪಾಟು ಮಾಡಿದ್ದರು. ಹೀಗೆ ಅವರ ಗುರುಕುಲದಲ್ಲಿ ವೇದಾಭ್ಯಾಸ, ತರ್ಕ, ಮೀಮಾಂಸ, ಸಾಂಖ್ಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗ ಮೊದಲಾದ ಶಾಸ್ತ್ರಗಳಲ್ಲದೆ, ಕಾವ್ಯ, ನಾಟಕ, ಅಲಂಕಾರ, ವ್ಯಾಕರಣ ಇವನ್ನು ಬೋಧಿಸುವುದಕ್ಕೂ ವ್ಯವಸ್ಥೆಯಿತ್ತು.

ಹೀಗೆ ವಿಶ್ವರೂಪರ ಮನೆ ಒಂದು ಪುಟ್ಟ ವಿಶ್ವವಿದ್ಯಾಲಯವಾಗಿತ್ತು. ಅವರ ವಾಸದ ಮನೆಗೆ ವಿದ್ಯಾಲಯ ಎಂಬ ಹೆಸರೇ ಇದ್ದು ಪಂಡಿತರೆಲ್ಲರೂ ಅವರನ್ನು ಗೌರವಪೂರ್ವಕವಾಗಿ 'ಮಂಡನ ಮಿಶ್ರ' ಎಂದು ಕರೆಯುತ್ತಿದ್ದರು. ಅವರಿಗೆ ಸರಿಸಾಟಿಯಾಗಿ ಉಭಯ ಭಾರತಿಯೂ ಶ್ರೇಷ್ಠ ವಿದುಷಿಯಾಗಿದ್ದುದರಿಂದ, ಜನ ಆಕೆಯನ್ನೂ ಬಹಳ ಗೌರವದಿಂದ ಕಾಣುತ್ತಿದ್ದರು. ಅವರಿಬ್ಬರನ್ನು ವೇದಪುರುಷನಾದ ಬ್ರಹ್ಮ, ವೇದಮಾತೆಯಾದ ಸರಸ್ವತಿ ಇವರ ಅವತಾರವೆಂದೇ ಜನ ಭಾವಿಸಿದ್ದರು. ವೇದ ಮತ್ತು ಶಾಸ್ತ್ರಗಳಲ್ಲಿ ಅವರನ್ನು ಮೀರಿಸಿದವರೇ ಇರಲಿಲ್ಲ.

5

ಶ್ರೀ ಶಂಕರಾಚಾರ್ಯರು ಆ ಕಾಲದಲ್ಲಿ ದೇಶವನ್ನೆಲ್ಲಾ ಸಂಚರಿಸುತ್ತಿದ್ದರು. ತಾವು ಹೋದ ಸ್ಥಳಗಳಲ್ಲಿ ಇದ್ದ ವಿದ್ವಾಂಸರನ್ನು ಭೇಟಿ ಮಾಡುತ್ತಿದ್ದರು. ಅವರಲ್ಲಿ ಶಾಸ್ತ್ರಗಳನ್ನು ಕುರಿತು ಚರ್ಚೆ ಮಾಡುತ್ತಿದ್ದರು. 'ತಾವು ತಮ್ಮ ಅಲೌಕಿಕ ಪ್ರತಿಭೆಯಿಂದ ಕಂಡ ಸತ್ಯವನ್ನು ಅವರಿಗೆ ಬೋಧಿಸುತ್ತಿದ್ದರು. ಊರಿಂದ ಊರಿಗೆ ಸತ್ಯ ಪ್ರಚಾರ ಮಾಡುತ್ತಾ ಪ್ರವಾಸ ಮಾಡುತ್ತಿದ್ದರು.

ಆಗಿನ ಕಾಲದ ಪಂಡಿತರು ಒಬ್ಬೊಬ್ಬರೂ ಮದಿಸಿದ ಆನೆಗಳಂತೆ ಇದ್ದು ತಾವು ಕಲಿತಿದ್ದ ವಿದ್ಯೆಯಲ್ಲಿ ಪ್ರಬಲರಾಗಿದ್ದರು. ಪ್ರತಿಯೊಬ್ಬರೂ ತಾವು ಕಲಿತಿರುವುದೇ ಸರಿ, ಇನ್ನೊಬ್ಬರ ತಿಳಿವು ತಪ್ಪು ಎಂದು ಭಾವಿಸಿದ್ದರು. ಸದಾ ಕಾಲದಲ್ಲಿಯೂ ಶಾಸ್ತ್ರದ

CC-O. Jagadguru Shri Shivarathri Rajendra Jnanabhandara Book Centre, Sringeri

 CC-0. In Public Domain. Digitized by eGangotri

ವಿಚಾರವನ್ನು ಚರ್ಚೆ ಮಾಡುತ್ತಿದ್ದರು. ತಾನು ಸರಿ ನೀನು ತಪ್ಪು ಎಂದೇ ಕಾದಾಡುತ್ತಿದ್ದರು.

ಆಗಿನ ಕಾಲದಲ್ಲಿ ಜನರೂ ಹಲವಾರು ಮತಗಳನ್ನು ಅನುಸರಿಸುತ್ತಿದ್ದರು. ದೇವರೇ ಇಲ್ಲ, ಅದೆಲ್ಲ ಮಾನವನ ಕಲ್ಪನೆ, ಸಾಲವನ್ನಾದರೂ ಮಾಡಿ ಸುಖಪಡು, ಎಂದು ಹೇಳುವ ನಾಸ್ತಿಕರು ತುಂಬಾ ಇದ್ದರು. ಹಿಂದೂ ಮತವನ್ನು ಬಿಟ್ಟು ಹೊರಗೆ ಹೋದ ಜೈನಮತ ಮತ್ತು ಬೌದ್ಧಮತದವರು ಹಿಂದೂ ಮತವನ್ನು ಟೀಕಿಸುತ್ತಿದ್ದರು, ಹಾಸ್ಯ ಮಾಡುತ್ತಿದ್ದರು. ಶಿವನನ್ನು ಪೂಜಿಸುವವರು ಶಿವನೇ ದೊಡ್ಡವನು, ಅವನನ್ನು ಪೂಜಿಸಬೇಕು ಎಂದು ಹೇಳುತ್ತಿದ್ದರು. ಹಾಗೆಯೇ ವಿಷ್ಣುವನ್ನು ಪೂಜಿಸುವವರು ವಿಷ್ಣುವನ್ನೇ ಪೂಜಿಸಿ, ಇಲ್ಲವಾದರೆ ನರಕ ಎಂದು ಸಾರುತ್ತಿದ್ದರು. ಗಣಪತಿ, ಸುಬ್ರಹ್ಮಣ್ಯ, ಸೂರ್ಯ, ದೇವೀ ಮುಂತಾದ ದೇವರನ್ನು ಪೂಜಿಸುತ್ತಿದ್ದವರು ತಮ್ಮ ಮತವೇ ದೊಡ್ಡದು, ಉಳಿದವು ಕೀಳು ಎಂದು ಪ್ರಚಾರ ಮಾಡುತ್ತಿದ್ದರು. ಇದರಿಂದ ದ್ವೇಷ, ಅಸೂಯೆಗಳು ತಲೆದೋರಿದ್ದವು. ಜನಗಳಲ್ಲಿ ಒಗ್ಗಟ್ಟು ತಪ್ಪಿಹೋಗಿತ್ತು. ಒಂದೊಂದು ಗುಂಪಿನದು ಒಂದೊಂದು ಜಾತಿಯಾಗಿತ್ತು.

ಶಂಕರರು ಮೊದಲು ಪಂಡಿತರನ್ನು ತಿದ್ದುವ ಕೆಲಸಕ್ಕೆ ಕೈ ಹಾಕಿದರು. ಮನೆಯ ಹಿರಿಯರನ್ನು ನೋಡಿ ತಾನೇ ಮಕ್ಕಳು ಕಲಿಯುವುದು ? ಹಿರಿಯರು ಒಳ್ಳೆಯ ಮಾತು, ಒಳ್ಳೆಯ ನಡವಳಿಕೆ ಇವನ್ನು ಅನುಸರಿಸಿದರೆ, ಮಕ್ಕಳೂ ಅವರಂತೆಯೇ ಒಳ್ಳೆಯ ಗುಣಗಳನ್ನು ಪಡೆಯುತ್ತವೆ. ಹಾಗೆಯೇ ನಾಡಿನ ಪಂಡಿತರೂ, ವಿದ್ವಾಂಸರೂ ಮುಂತಾದ ಹಿರಿಯರು ಸರಿಯಾದ ದಾರಿಯಲ್ಲಿ ನಡೆದರೆ ಜನರೂ ಅವರನ್ನು ಅನುಸರಿಸುತ್ತಾರೆ. ದೊಡ್ಡವರು ತಪ್ಪುದಾರಿಯಲ್ಲಿ ನಡೆದರೆ ಜನರೂ ತಪ್ಪುದಾರಿಯಲ್ಲಿ ನಡೆಯುತ್ತಾರೆ. Sri Vidyabharathi Book Centre, Sringeri

CC-O. In Public Domain. Digitized by eGangotri



ಶೈವಭಕ್ತರಿಗೂ ವಿಷ್ಣುಭಕ್ತರಿಗೂ ಐಕಮತ್ಯವೇ ಇರಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಡಿತರನ್ನು ಸಂಧಿಸಿದ ಶಂಕರರು, ಅವರ ಅಂಧ ಅಭಿಮಾನವನ್ನು ಕಂಡು ತುಂಬಾ ನೊಂದರು. ಅವರು ಕಲಿತಿದ್ದ ಶಾಸ್ತ್ರ, ಕಲೆ ಮುಂತಾದವುಗಳಲ್ಲಿ ಚರ್ಚೆ ಮಾಡಿದರು. ಎಲ್ಲ ಶಾಸ್ತ್ರಗಳ ಗುರಿಯೂ ಒಂದೇ ಎಂಬುದನ್ನು ಅವರಿಗೆ ತೋರಿಸಿಕೊಟ್ಟರು. ಪಂಡಿತರ ನಡೆನುಡಿಗಳಲ್ಲಿ ಇದ್ದ ಲೋಪದೋಷಗಳನ್ನು ಜನತೆಗೆ ತೋರಿಸಿಕೊಟ್ಟರು. ಅವರನ್ನು ಸರಿ ಹಾದಿಯಲ್ಲಿ ಹೋಗುವಂತೆ ತಿದ್ದಿ ನಡೆಸಿದರು.

"ಸತ್ಯವು ಒಂದೇ ಆಗಿದೆ. ಅದನ್ನು ತೋರಿಸಿಕೊಡುವ ಮಾರ್ಗಗಳು ಹಲವಾರು. ಇರುವ ದೇವರು ಒಬ್ಬನೇ. ಅವನಿಗೆ ಸಾವಿರಾರು ಹೆಸರುಗಳು ಇವೆ. ಯಾವುದೇ ಹೆಸರಿನಿಂದ ಪೂಜಿಸಿದರೂ, ಇರುವ ಆ ಒಬ್ಬನಿಗೇ ಅದು ಸಲ್ಲುತ್ತದೆ. ಮತದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಜಗಳ ಸಲ್ಲದು. ಆ ದೇವರನ್ನೇ ವೇದಗಳು ಬ್ರಹ್ಮ, ಆತ್ಮ ಎಂದು ಕರೆಯುತ್ತವೆ. ಪುರಾಣಗಳು ಶಿವ, ವಿಷ್ಣು, ದೇವಿ, ಗಣಪತಿ, ಸೂರ್ಯ, ಕುಮಾರ ಎಂಬ ಹೆಸರುಗಳಿಂದ ಆ ದೇವನನ್ನೇ ಕರೆಯುತ್ತವೆ. ಆತ್ಮವೊಂದೇ ಸತ್ಯ. ಆತ್ಮನು ಎಲ್ಲೆಡೆಯಲ್ಲಿಯೂ ವ್ಯಾಪಿಸಿದ್ದಾನೆ" ಎಂದು ಬೋಧಿಸಿದರು. ಅನೇಕ ಜನ ಪಂಡಿತರು ಶಂಕರರಲ್ಲಿ ತಮ್ಮ ತಮ್ಮ ಅನುಮಾನಗಳನ್ನು ಹೇಳಿಕೊಂಡರು. ತಮ್ಮ ತಪ್ಪುಗಳನ್ನು ಕಂಡುಕೊಂಡು ತಿದ್ದಿಕೊಂಡರು. ಬಹು ಜನ ಅವರ ಅನುಯಾಯಿಗಳಾದರು.

6

ವಿಶ್ವರೂಪರಿಗೆ ಶಂಕರಾಚಾರ್ಯರ ವಿಚಾರ ಸ್ವಲ್ಪ ತಿಳಿದಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ದಕ್ಷಿಣ ಭಾರತದ ತರುಣ ಸಂನ್ಯಾಸಿಯೊಬ್ಬರು, ದೇಶವನ್ನೆಲ್ಲಾ ಸುತ್ತುತ್ತಿದ್ದಾರೆ, ಪಂಡಿತರನ್ನೆಲ್ಲಾ ವಾದದಲ್ಲಿ ಗೆಲ್ಲುತ್ತಿದ್ದಾರೆ, ಬಹುಜನ ಅವರ ಅನುಯಾಯಿಗಳಾಗುತ್ತಿದ್ದಾರೆ, ಎಂಬುದು ವಿಶ್ವರೂಪರಿಗೆ ತಿಳಿದಿತ್ತು. ಅವರು ವಿಸ್ಮಿತರಾಗಿದ್ದರು. ಯಾರಿರ ಬಹುದು ಈ ಬಾಲಸನ್ಯಾಸಿ? ಎಂದು ಅವರು ಕುತೂಹಲ ತಾಳಿದ್ದರು.

ಆತನು ತಮ್ಮಲ್ಲಿಗೂ ಎಂದಾದರೂ ಬರಬಹುದು ಎಂದು ವಿಶ್ವರೂಪರು ನಿರೀಕ್ಷೆ ಮಾಡುತ್ತಿದ್ದರು. ಶಂಕರರಲ್ಲಿ ತಾವೂ ಒಂದು ದಿನ ವಾದ ಮಾಡಬಹುದು ಎಂದು ಎದುರು ನೋಡುತ್ತಿದ್ದರು.

ವಿಶ್ವರೂಪರ ನಿರೀಕ್ಷೆ ಸುಳ್ಳಾಗಲಿಲ್ಲ. ಶಂಕರರು ಸಿಂಹವನ್ನು ಕೆಣಕಲು ಸಿಂಹದ ಗುಹೆಗೇ ನುಗ್ಗುವ ಧೀರ ಸಾಹಸಿಯಂತೆ ಮಾಹಿಷ್ಮತಿಗೆ ಬಂದರು.

ಶಂಕರರು ದೇಶವನ್ನೆಲ್ಲಾ ಸುತ್ತುತ್ತಾ ಪ್ರಯಾಗಕ್ಕೆ ಬಂದಿದ್ದರು. ಅಲ್ಲಿ ಇದ್ದ ಖ್ಯಾತ ವಿದ್ವಾಂಸರಾದ ಕುಮಾರಿಲ ಭಟ್ಟರನ್ನು ಭೇಟಿ ಮಾಡಿದರು. ಅವರಲ್ಲಿ ತಾವು ವಾದ ಮಾಡಲು ಬಂದಿರುವುದಾಗಿ ತಿಳಿಸಿದರು. ವೃದ್ಧರಾಗಿದ್ದ ಕುಮಾರಿಲ ಭಟ್ಟರಿಗೆ ಈ ತರುಣನನ್ನು ಕಂಡು ಆಶ್ಚರ್ಯವಾಯಿತು. ಸಿಂಹ ಸಲಗಗಳಂತಹ ಅನೇಕ ಜನ ವಿದ್ವಾಂಸರು ತನ್ನಲ್ಲಿ ವಾದ ಮಾಡಲು ಬಂದು ಸೋತು ಹೋಗಿರುವಾಗ, ಈ ತರುಣ ವಾದ ಮಾಡುತ್ತೇನೆ ಎನ್ನುವನಲ್ಲ, ಎಂದು ಅವರಿಗೆ ಆಶ್ಚರ್ಯವಾಯಿತು. ಆದರೆ ಕುಮಾರಿಲರು ಶಂಕರರೊಡನೆ ಚರ್ಚೆ, ವಾದ ಮಾಡುವ ಸ್ಥಿತಿಯಲ್ಲಿಯೇ ಇರಲಿಲ್ಲ. ಅವರು ತಾವು ಹಿಂದೆ ಮಾಡಿದ ತಪ್ಪಿಗಾಗಿ ತಾವಾಗಿ ಶಿಕ್ಷೆಯನ್ನು ಅನುಭವಿಸಲು, ಹೊಟ್ಟಿಗೆ ಬೆಂಕಿ ಹಚ್ಚಿ ಅದರ ನಡುವೆ ಕುಳಿತಿದ್ದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಶಂಕರರ ಮಾತನ್ನು ಕೇಳಿದ ಅವರು "ಯತಿವರ್ಯರೇ, ತಮ್ಮ ವಿಚಾರವನ್ನು ನಾನು ಯಾತ್ರಿಕರಿಂದ ಕೇಳಿದ್ದೆ. ಇಂದು ತಮ್ಮನ್ನು ನೋಡಿ ಸಂತೋಷವಾಯಿತು. ನಾನು ಹಿಂದೊಮ್ಮೆ ಗುರುದ್ರೋಹ ಮಾಡಿದ್ದೆನು. ಅದರ ಪ್ರಾಯಶ್ಚಿತ್ತವಾಗಿ ಈಗ ಹೊಟ್ಟಿನ ಬೆಂಕಿಯಲ್ಲಿ ಕುಳಿತು ಪ್ರಾಣತ್ಯಾಗ ಮಾಡುತ್ತಿದ್ದೇನೆ. ನೀವು ಮಾಹಿಷ್ಮತಿಗೆ ಹೋಗಿ ಅಲ್ಲಿ ನನ್ನ ಶಿಷ್ಯ ವಿಶ್ವರೂಪನು ಇದ್ದಾನೆ. ಆತನೊಡನೆ ವಾದ ಮಾಡಬಹುದು" ಎಂದು ಹೇಳಿದರು. ಶಂಕರರು ಕುಮಾರಿಲರನ್ನು ಮೆಚ್ಚಿಕೊಂಡು, ಅವರನ್ನು ಬೀಳ್ಕೊಂಡು ಮಾಹಿಷ್ಮತಿಯತ್ತ ಬಂದರು.

7

ಶಂಕರರು ಮಾಹಿಷ್ಮತಿಯ ಶಿವ ದೇವಸ್ಥಾನವೊಂದರಲ್ಲಿ ಬಿಡಾರ ಮಾಡಿದರು. ನರ್ಮದಾ ನದಿಯಲ್ಲಿ ಸ್ನಾನಗೈದರು. ಬೆಳಗಿನ ತಮ್ಮ ಪೂಜೆ, ಧ್ಯಾನಗಳನ್ನು ನೆರವೇರಿಸಿದರು. ತಮ್ಮ ಶಿಷ್ಯರನ್ನು ಕರೆದುಕೊಂಡು ವಿಶ್ವರೂಪರ ಮನೆಯನ್ನು ಅರಸಿ ಹೋದರು.

ದಾರಿಯಲ್ಲಿ ನೀರಿಗಾಗಿ ನದಿಗೆ ಬರುತ್ತಿದ್ದ ಮಹಿಳೆಯರನ್ನು ಕಂಡ ಶಂಕರರು "ಅಮ್ಮಾ ಇಲ್ಲಿ ವಿಶ್ವರೂಪರೆಂಬ ದೊಡ್ಡ ವಿದ್ವಾಂಸರಿರುವರಲ್ಲ ಅವರ ಮನೆ ಎಲ್ಲಿ ?" ಎಂದು ಪ್ರಶ್ನಿಸಿದರು.

ಆ ಮಹಿಳೆಯರು ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತಾ, "ಇವರಾರೋ ಹೊಸಬರಂತೆ ಕಾಣುತ್ತಾರೆ. ಆದ್ದರಿಂದಲೇ ಇವರಿಗೆ ಆಚಾರ್ಯ ವಿಶ್ವರೂಪರ ಮನೆ ಎಲ್ಲಿದೆಯೆಂದು ಗೊತ್ತಿಲ್ಲ" ಎಂದು ಮಾತನಾಡಿಕೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರರತ್ತ ತಿರುಗಿ "ಸ್ವಾಮಿ, ನೀವು ಹೊಸಬರಂತೆ ಕಾಣುತ್ತೀರಿ. ವಿಶ್ವರೂಪರ ಮನೆ ಗುರುತಿಸುವುದು ಅಷ್ಟೇನೂ ಕಷ್ಟವಲ್ಲ. ಇದೇ ದಾರಿಯಲ್ಲಿ ಹೋಗಿರಿ. ಯಾರ ಮನೆಯ ಮುಂದೆ ಪಂಜರಗಳಲ್ಲಿ ಇರುವ ಗಿಣಿಗಳು ಶಾಸ್ತ್ರ ವಿಚಾರವನ್ನು ಕುರಿತು ಚರ್ಚೆ ಮಾಡುತ್ತಿರುತ್ತವೆಯೋ ಅದೇ ವಿಶ್ವರೂಪರ ಮನೆ ಎಂದು ತಿಳಿಯಿರಿ" ಎಂದು ಆ ಮಹಿಳೆಯರು ಹೇಳಿದರು.

ಶಂಕರರಿಗೆ ಆಶ್ಚರ್ಯವಾಯಿತು. ಛಲೆ, ಮನೆಯಲ್ಲಿರುವ ಪಕ್ಷಿಗಳೂ ಸಹ ಶಾಸ್ತ್ರ ಚರ್ಚೆ ಮಾಡುತ್ತಿರಬೇಕಾದರೆ, ಆ ಮನೆಯ ಒಡೆಯ ದೊಡ್ಡ ವಿದ್ವಾಂಸನೇ ಆಗಿರಬೇಕು; ಸಂದೇಹವಿಲ್ಲ ಎಂದು ಕೊಂಡು, ಮುಂದಕ್ಕೆ ಹೊರಟರು.

ಆ ಸ್ತ್ರೀಯರು ಹೇಳಿದಂತೆಯೇ ಆಯಿತು. ಶಂಕರರಿಗೆ ವಿಶ್ವರೂಪರ ಮನೆಯ ಗುರುತು ಬೇಗ ಸಿಕ್ಕಿತು. ಬಹಳ ವಿಸ್ತಾರವಾದ ಜಾಗದಲ್ಲಿದ್ದ, ಸುಂದರವಾದ ಅರಮನೆಯಂತೆ ಇದ್ದ ಮನೆ ವಿಶ್ವರೂಪರದು. ಮನೆಯ ಸುತ್ತಲೂ ತೋಟ, ಬಾಗಿಲಲ್ಲಿ ತೂಗು ಬಿಟ್ಟಿದ್ದ ಪಂಜರಗಳಲ್ಲಿ ಚಿಲಿಪಿಲಿಗುಡುತ್ತಿದ್ದ ಸುಂದರ ಪಕ್ಷಿಗಳು, ಕೈತೋಟದಲ್ಲಿ ಆಟವಾಡುತ್ತಿದ್ದ ಹುಲ್ಲೆ ಹರಿಣಿಗಳು, ಮರಗಳ ನೆರಳಲ್ಲಿ ಕುಳಿತು ಓದುತ್ತಿದ್ದ ವಿದ್ಯಾರ್ಥಿವೃಂದ, ಮನೆಯ ಹೊರ ಗೆಲಸಗಳಲ್ಲಿ ನಿರತರಾಗಿದ್ದ ಆಳುಕಾಳುಗಳು, ಇದನ್ನೆಲ್ಲಾ ನೋಡಿದ ಶಂಕರರು 'ಈತ ನಿಜವಾಗಿಯೂ ಭಾಗ್ಯವಂತ' ಎಂದು ವಿಶ್ವರೂಪರನ್ನು ಮನಸ್ಸಿನಲ್ಲಿಯೇ ಮೆಚ್ಚಿಕೊಂಡರು.

ಬಾಗಿಲ ಬಳಿಗೆ ಬಂದ ಶಂಕರರನ್ನು ಕಂಡ, ಮನೆಯ ಸೇವಕನು ಗೌರವದಿಂದ ತಲೆಬಾಗಿ "ಸ್ವಾಮಿ ತಾವು ಯಾರು ?" ಎಂದು ಕೇಳಿದನು.

ಶಂಕರರು "ಅಪ್ಪಾ, ನನ್ನನ್ನು ಶಂಕರ ಯತಿ ಎಂದು ಕರೆಯುತ್ತಾರೆ. ನಾನು ದಕ್ಷಿಣ ದೇಶದಿಂದ ಬಂದಿದ್ದೇನೆ. ಭರತಖಂಡದ

Sri Vidyabharathi Book Centre, Sringeri

CC-O. In Public Domain. Digitized by eGangotri



"ಅಮ್ಮಾ, ಇಲ್ಲಿ ವಿಶ್ವರೂಪರ ಮನೆ ಎಲ್ಲಿ!"

Sri Vidyabharathi Book Centre, Sringeri

 CC-O. In Public Domain. Digitized by eGangotri

ವಿದ್ವಾಂಸರನ್ನೆಲ್ಲಾ ಭೇಟಿ ಮಾಡುವ, ಅವರಲ್ಲಿ ಚರ್ಚೆ ಮಾಡುವ ಉದ್ದೇಶದಿಂದ ದೇಶವನ್ನು ಸುತ್ತುತ್ತಿದ್ದೇನೆ. ನಿಮ್ಮ ಯಜಮಾನರನ್ನು ನಾನು ಕಾಣಬೇಕು" ಎಂದರು.

ಆತ "ಸ್ವಾಮಿ, ಯಜಮಾನರು ಒಳಗಿದ್ದಾರೆ. ಈ ದಿನ ಅವರ ತಂದೆಯ ಶ್ರಾದ್ಧವಾದ್ದರಿಂದ ಬಾಗಿಲು ಹಾಕಿಕೊಂಡಿದ್ದಾರೆ" ಎಂದನು.

ಶಂಕರರು "ಅಪ್ಪಾ, 'ನಿಮ್ಮನ್ನು ಕಾಣಲು ದಕ್ಷಿಣ ದೇಶದ ಸಂನ್ಯಾಸಿಯೊಬ್ಬರು ಬಂದಿದ್ದಾರೆ' ಎಂದು ನಿಮ್ಮ ಯಜಮಾನರಿಗೆ ತಿಳಿಸುವೆಯಾ ?" ಎಂದರು.

ಆತನು ಒಳಗೆ ಹೋಗಿ ಶಂಕರರು ಬಂದಿರುವ ವಿಚಾರವನ್ನು ವಿಶ್ವರೂಪರಿಗೆ ಬಿನ್ನವಿಸಿದನು. ವಿಶ್ವರೂಪರು ಹೊರಗೆ ಬಂದರು.

ಬೆಳಗುವ ದೀಪದ ಕುಡಿಯಂತೆ, ಕಾವಿಯ ವಸ್ತ್ರವನ್ನುಟ್ಟು ನಿಂತಿದ್ದ ಶಂಕರರನ್ನು ನೋಡಿದರು. ಆ ಯುವಕ ಸಂನ್ಯಾಸಿಯ ಮುಖ ಸೂರ್ಯನಂತೆ ಪ್ರಕಾಶಮಾನವಾಗಿತ್ತು. ಚಂದ್ರನಂತೆ ಪ್ರಸನ್ನವಾಗಿತ್ತು.

ಶಂಕರರನ್ನು ಕಂಡು ಗೌರವ ಮೂಡಿತು. ಆದರೆ ವಿಶ್ವರೂಪರು ಸಂನ್ಯಾಸಿಗಳ ಬಗ್ಗೆ ಆದರ ಹೊಂದಿರಲಿಲ್ಲ. ಎಲ್ಲ ಕರ್ಮಗಳನ್ನು ಬಿಟ್ಟು ದಿನವೂ ಊರೂರು ಅಲೆಯುತ್ತ ಇರುವ ಸಂನ್ಯಾಸಿಗಳ ಬಗ್ಗೆ ಅವರಿಗೆ ಅಸಮಾಧಾನವಿತ್ತು. ವಿಶ್ವರೂಪರು ನಿತ್ಯವೂ ಜಪ, ಹೋಮಗಳನ್ನು ಮಾಡುತ್ತಿದ್ದರಲ್ಲವ ? ಅವುಗಳನ್ನು ಮಾಡದವರ ಬಗ್ಗೆ ಅವರಿಗೆ ಸಹನೆ ಇರಲಿಲ್ಲ. ಅವರು ಶಂಕರರನ್ನು ಅಸಮಾಧಾನದಿಂದಲೇ ಮಾತನಾಡಿಸಿದರು.

ಆ ವೇಳೆಗೆ ಉಭಯ ಭಾರತಿಯೂ ಹೊರಕ್ಕೆ ಬಂದರು. ಆ ದಿನ ಊಟಕ್ಕಾಗಿ ಬಂದಿದ್ದ ಪಂಡಿತರೂ ಹೊರಕ್ಕೆ ಬಂದರು. ಎಲ್ಲರಿಗೂ ಶಂಕರರನ್ನು ಕಂಡಕೂಡಲೇ ಗೌರವಾದರ ಭಾವ

Sri Vidyabharathi Book Centre, Sringeri

CC-0. In Public Domain. Digitized by eGangotri

ಮೂಡಿತು. ಅವರು ವಿಶ್ವರೂಪರನ್ನು ಕುರಿತು, "ಆಚಾರ್ಯ, ಮಧ್ಯಾಹ್ನ ಕಾಲದಲ್ಲಿ ಬಂದಿರುವ ಈ ಸಂನ್ಯಾಸಿಯನ್ನು ಆದರದಿಂದ ಒಳಕ್ಕೆ ಬರಮಾಡಿಕೊಳ್ಳಿ. ಅವರನ್ನು ಗೌರವದಿಂದ ಸತ್ಕರಿಸಿರಿ" ಎಂದರು.

ಶಂಕರಾಚಾರ್ಯರು ತಮಗೆ ಅನ್ನದ ಭಿಕ್ಷೆ ಬೇಡವೆಂದೂ, — ಶಾಸ್ತ್ರ ವಿಚಾರದಲ್ಲಿ ಚರ್ಚೆಯ–ವಾದದ ಭಿಕ್ಷೆ ಬೇಕೆಂದೂ ಕೇಳಿದರು. ಅವರ ಮಾತಿಗೆ ಎಲ್ಲರೂ ತಲೆದೂಗಿ "ಈ ದಿನ ತಾವು ಇಲ್ಲಿ ಅನ್ನದ ಭಿಕ್ಷೆ ಸ್ವೀಕರಿಸಿ. ನಾಳೆಯ ದಿನ ವಾದದ ಭಿಕ್ಷೆಯನ್ನು ನೀಡುತ್ತೇವೆ" ಎಂದರು. ಶಂಕರರು ಒಪ್ಪಿದರು. ಅಂದು ವಿಶ್ವರೂಪರು ತಮ್ಮ ತಂದೆಯವರ ಶ್ರಾದ್ಧವನ್ನು ನೆರವೇರಿಸಿದರು. ಶಂಕರರಿಗೂ ಆತಿಥ್ಯವನ್ನು ಮಾಡಿ ಸತ್ಕರಿಸಿದರು.

8

ಮಾರನೆಯ ಬೆಳಿಗ್ಗೆ ವಿಶ್ವರೂಪರ ಮನೆಯ ವಿಶಾಲವಾದ ಹಜಾರದಲ್ಲಿ ವಿದ್ವಾಂಸರ ಸಭೆ ಸೇರಿತು. ಮಾಹಿಷ್ಮತಿಯಲ್ಲಿ ಇದ್ದ ಎಲ್ಲ ವಿದ್ವಾಂಸರೂ ಅಲ್ಲಿ ಬಂದಿದ್ದರು. ಶಂಕರರು ತಮ್ಮ ನಾಲ್ಕೈದು ಜನ ಶಿಷ್ಯರನ್ನು ಕರೆದುಕೊಂಡು ಆ ಸಭೆಗೆ ಬಂದರು. ಅಲ್ಲಿದ್ದವರಿಗೆಲ್ಲಾ ಶಂಕರರನ್ನು ಕಂಡು ಆಶ್ಚರ್ಯವಾಯಿತು. ಇಷ್ಟು ಚಿಕ್ಕ ಹುಡುಗ—ಆಗ ಶಂಕರರ ವಯಸ್ಸು ಇನ್ನೂ ಹದಿನೆಂಟು– ವಿಶ್ವರೂಪರೊಡನೆ ವಾದ ಮಾಡಲು ಬಂದಿದ್ದಾನಲ್ಲ ! ಎಷ್ಟು ಧೈರ್ಯ ! ಎಂದು ಎಲ್ಲರಿಗೂ ವಿಸ್ಮಯ.

ಸಭೆಯಲ್ಲಿ ವಿಶ್ವರೂಪರೂ ಶಂಕರರೂ ಎದುರು ಬದುರಾಗಿ ಕುಳಿತರು. ಅವರ ಚರ್ಚಾಕೂಟಕ್ಕೆ ಉಭಯ ಭಾರತಿಯೇ ಅಧ್ಯಕ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri



ಉಭಯರು ಭಾರತಿಯು ಅದ್ವೈತಿಯಲ್ಲಿ ಜಯಿಸಿ ಆರಂಭಿಸಿದರು

Sri Vidyabharathi Book Centre, Sringeri

 CC-0. In Public Domain. Digitized by eGangotri

ರಾಗಬೇಕೆಂದು ಪಂಡಿತರೆಲ್ಲಾ ಹೇಳಿದರು. ಶಂಕರರೂ ವಿಶ್ವರೂಪರೂ ಅದಕ್ಕೆ ಒಪ್ಪಿದರು. ಉಭಯ ಭಾರತಿ ಬಂದು ಅಧ್ಯಕ್ಷ ಪೀಠದಲ್ಲಿ ಕುಳಿತರು.

ವಾದ ಆರಂಭವಾಯಿತು.

ಶಂಕರರು ವೇದಗಳ ಅಂತಿಮ ಭಾಗವಾದ ವೇದಾಂತವನ್ನು ತಮ್ಮ ವಾದಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದರು. ವಿಶ್ವರೂಪರಾದರೋ ವೇದದ ಪೂರ್ವಭಾಗವನ್ನು ಆಧಾರವಾಗಿ ಇಟ್ಟುಕೊಂಡಿದ್ದರು.

ಶಂಕರರು ವಾದದಲ್ಲಿ ಸೋತರೆ, ಸಂನ್ಯಾಸವನ್ನು ಬಿಟ್ಟು ಸಂಸಾರಿಯಂತೆ ಇರಬೇಕಾಗಿತ್ತು. ವಿಶ್ವರೂಪರು ಸೋತರೆ ಸಂಸಾರವನ್ನು ತ್ಯಜಿಸಿ ಸಂನ್ಯಾಸಿಯಂತೆ ಇರಬೇಕಾಗಿತ್ತು. ಇಬ್ಬರೂ ಹಾಗೆಯೇ ಪ್ರತಿಜ್ಞೆ ಮಾಡಿದರು. ಇಬ್ಬರೂ ದೊಡ್ಡ ವಿದ್ವಾಂಸರು. ವಾದವು ಬಹಳ ಬಿರುಸಿನಿಂದ ಚುರುಕಾಗಿ ನಡೆಯುತ್ತಿತ್ತು.

ಮಧ್ಯಾಹ್ನ ಸ್ವಲ್ಪ ಹೊತ್ತು ಮಾತ್ರ ವಿರಾಮ—ಊಟಕ್ಕಾಗಿ. ಬೆಳಿಗ್ಗೆ ಇಬ್ಬರೂ ತಮ್ಮ ಪೂಜೆ, ಧ್ಯಾನ, ಹೋಮಗಳನ್ನು ಮುಗಿಸಿಕೊಂಡು ವಾದಕ್ಕೆ ಕುಳಿತುಕೊಳ್ಳುತ್ತಿದ್ದರು. ಮಧ್ಯಾಹ್ನ ಊಟವಾದ ನಂತರ ಸ್ವಲ್ಪಕಾಲ ವಿಶ್ರಾಂತಿ ಪಡೆದು ಮತ್ತೆ ಚರ್ಚೆ ಆರಂಭಿಸುತ್ತಿದ್ದರು. ಸಂಜೆ ಸೂರ್ಯ ಮುಳುಗುವವರೆಗೂ ವಾದ ನಡೆಯುತ್ತಿತ್ತು. ಹೀಗೆ ಹಲವಾರು ದಿನಗಳಕಾಲ ವಾದ ನಡೆದು, ಶಂಕರರಿಗೇ ಗೆಲುವಾಯಿತು. ವಿಶ್ವರೂಪರು ತಮ್ಮ ತಿಳಿವು ಸರಿಯಾದ್ದಲ್ಲ, ಶಂಕರರು ಹೇಳುವುದೇ ಸರಿ ಎಂಬ ಅಭಿಪ್ರಾಯಕ್ಕೆ ಬಂದರು.

ಮುಂದೇನು ?

ವಿಶ್ವರೂಪರಿಗೆ ತಾವು ಇಲ್ಲಿಯವರೆಗೆ ನಂಬಿಕೊಂಡು ಬಂದ ಮಾರ್ಗ ತಪ್ಪಾದುದೇ ? ವೇದದ ಪೂರ್ವಭಾಗವೆನ್ನಿಸಿದ ಕರ್ಮಕಾಂಡ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಆಧಾರ ಮಾಡಿಕೊಂಡು ಜೈಮಿನಿ ಮಹರ್ಷಿಗಳು ಪೂರ್ವ ಮೀಮಾಂಸಾ ಶಾಸ್ತ್ರವನ್ನು ಬರೆದರಲ್ಲವೇ ? ಅವರ ಅಭಿಪ್ರಾಯ ತಪ್ಪೇ ಎನಿಸಿತು. ಅವರು ಶಂಕರರನ್ನು ಪ್ರಶ್ನಿಸಿದರು. ಶಂಕರರು "ವಿಶ್ವರೂಪರೇ, ಜೈಮಿನಿ ಮಹರ್ಷಿಗಳು ಕರ್ಮಕ್ಕೆ ಮುಖ್ಯಸ್ಥಾನ ಕೊಟ್ಟಿರುವುದು ಸರಿಯಾದದ್ದೇ. ಕರ್ಮ ಮಾಡುವುದರಿಂದ ನಮ್ಮ ಮನಸ್ಸು ಶುದ್ಧವಾಗುತ್ತದೆ. ಕರ್ಮದ ಫಲವನ್ನು ಬಯಸದೇ ಕರ್ಮ ಮಾಡಿದರೆ, ಅದರಿಂದ ದಿಟವಾಗಿ ಚಿತ್ತವು ಶುದ್ಧವಾಗುತ್ತದೆ. ಅನಂತರ ನಾವು ಬ್ರಹ್ಮತತ್ತ್ವವನ್ನು ಅರಿಯುವುದು ಸುಲಭವಾಗುತ್ತದೆ. ಜೈಮಿನಿ ಮಹರ್ಷಿಗಳ ಉಪದೇಶವು ವೇದಾಂತ ತತ್ತ್ವವನ್ನು ಅರಿಯಲು ಸಹಾಯಕವಾಗಿಯೇ ಇದೆ" ಎಂದು ಹೇಳಿದರು. ವಿಶ್ವರೂಪರಿಗೆ ಸಮಾಧಾನವಾಯಿತು.

ವೇದಾಂತ ಎಂದರೆ ವೇದದ ಕೊನೆಯಲ್ಲಿ ಬರುವ ವಿಚಾರ ಎಂದು ಅರ್ಥ. ಅದೇ ಉಪನಿಷತ್ತುಗಳು. ವೇದಗಳಲ್ಲಿ ಸಂಹಿತೆ, ಬ್ರಾಹ್ಮಣ, ಆರಣ್ಯ ಎಂದು ಸಾಮಾನ್ಯ ವಿಭಾಗಗಳು. ಉಪನಿಷತ್ತುಗಳು ಆರಣ್ಯಕದ ಭಾಗಕ್ಕೆ ಸೇರಿದವು. ಬ್ರಾಹ್ಮಣ ಭಾಗದಲ್ಲಿ ಯಜ್ಞ ಯಾಗಾದಿ ಕರ್ಮಗಳ ವಿಚಾರವಿದೆ. ಸಂಹಿತಾ ಭಾಗದಲ್ಲಿ ಸ್ತೋತ್ರಗಳಿವೆ. ಇಡೀ ವೇದರಾಶಿಯ ಸಾರವು ಅಡಕವಾಗಿರುವುದೇ ಉಪನಿಷತ್ತುಗಳಲ್ಲಿ.

ಯಾವುದಾದರೂ ಗಿಡವನ್ನು ತೆಗೆದುಕೊಳ್ಳಿ. ಅದರಲ್ಲಿ ಮೊದಲು ಹೂ ಬಿಡುತ್ತದೆ. ಅನಂತರ ಹೂ ಹೀಚಾಗುತ್ತದೆ. ಹೀಚು ಕಾಯಿ ಆಗುತ್ತದೆ. ಕಾಯಿ ಹಣ್ಣಾಗುತ್ತದೆ. ಮಾವಿನ ಗಿಡದಲ್ಲಿ ಮಾವಿನ ಹೂ, ಅನಂತರ ಹೀಚು, ಆ ಬಳಿಕ ಕಾಯಿ, ಕೊನೆಯಲ್ಲಿ ಹಣ್ಣು. ಹೀಚು ಒಗರು, ಕಾಯಿ ಹುಳಿ, ಹಣ್ಣು ಸಿಹಿಯಾಗಿರುತ್ತದೆ. ಆ ಹಣ್ಣೇ ಗಿಡದ ಸಾರಸರ್ವಸ್ವ. ಹಾಗೆಯೇ ವೇದರಾಶಿಯಲ್ಲಿ ಉಪನಿಷತ್ತುಗಳು. ಶಂಕರರು ಈ ಉಪನಿಷತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri



"ಹೇಗೆ ಹಣ್ಣೇ ಗಿಡದ ಸಾರಸರ್ವಸ್ವವೋ ಹಾಗೆಯೆ ಉಪನಿಷತ್ತುಗಳು"

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ ಆಧಾರದ ಮೇಲೆ ತಮ್ಮ ವಾದವನ್ನು ಮಾಡಿದರು. ವಿಶ್ವರೂಪರು ಶಂಕರರ ನಿಲುವೇ ಸರಿ ಎಂಬುದನ್ನು ಒಪ್ಪಿಕೊಂಡರು.

ಉಭಯ ಭಾರತಿಯೂ ಶಂಕರರ ನಿಲುವೇ ಸರಿ ಎಂದು ತಮ್ಮ ತೀರ್ಮಾನವನ್ನು ಹೇಳಿದರು. ಪಂಡಿತರ ಸಭೆಯೂ ಅದನ್ನು ಒಪ್ಪಿತು.

ಮಾರನೆಯ ದಿನ ಉಭಯ ಭಾರತೀ ದೇವಿಯೂ ಶ್ರೀ ಶಂಕರರೊಡನೆ ವಾದ ಮಾಡಲು ಇಚ್ಛೆಪಟ್ಟರು. ಶಂಕರರು ಮೊದಲು ಒಪ್ಪಲಿಲ್ಲ. ಅನಂತರ ಒಪ್ಪಿದರು. ಆಕೆಯೊಡನೆ ಹಲವಾರು ದಿನ ವಾದ ನಡೆಯಿತು. ಆಕೆಯೂ ಶ್ರೀ ಶಂಕರರ ಪ್ರತಿಭೆ, ಆಳವಾದ ಜ್ಞಾನ ಇವನ್ನು ಮೆಚ್ಚಿಕೊಂಡರು. ಶಂಕರರ ನಿಲುವೇ ಸರಿ ಎಂದು ಹೃತ್ಪೂರ್ವಕವಾಗಿ ಹೇಳಿದರು.

9

ವಿಶ್ವರೂಪರು ತಾವು ಶ್ರೀ ಶಂಕರರ ಶಿಷ್ಯರಾಗಲು ನಿರ್ಧರಿಸಿದರು. ಸಂನ್ಯಾಸ ತೆಗೆದುಕೊಳ್ಳಲು ತೀರ್ಮಾನಿಸಿದರು.

ಪತ್ನಿ ಉಭಯ ಭಾರತಿಯೊಡನೆ ತಮ್ಮ ಮನಸ್ಸಿನಲ್ಲಿ ಮೂಡಿದ್ದ ಇಚ್ಛೆಯನ್ನು ತಿಳಿಸಿದರು. "ನಾನು ವಾದದಲ್ಲಿ ಸೋತುದಕ್ಕಾಗಿ ಸಂನ್ಯಾಸಿಯಾಗುತ್ತಿಲ್ಲ. ವಾದದ ಮೊದಲು ಮಾಡಿದ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿ ಸಂನ್ಯಾಸ ಸ್ವೀಕರಿಸುತ್ತಿಲ್ಲ. ನನಗೆ ದಿಟವಾಗಿಯೂ, ಎಲ್ಲವನ್ನೂ ಬಿಟ್ಟು ಈ ಗುರುವನ್ನು ಆಶ್ರಯಿಸಿ, ಜ್ಞಾನದೀಕ್ಷೆಯನ್ನು ಪಡೆಯಬೇಕು ಎಂಬ ಹಂಬಲ ಮೂಡಿದೆ. ಆದ್ದರಿಂದ ನೀನು ಅನುಮತಿ ಕೊಡುವೆಯಾ ?" ಎಂದು ಹೇಳಿದರು.

CC-O. In Public Domain. Digitized by eGangotri



ವಿಶ್ವರೂಪರು ಶಿಷ್ಯತ್ವಕ್ಕಾಗಿ ಶಂಕರರಲ್ಲಿ ಪ್ರಾರ್ಥಿಸಿದರು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂನ್ಯಾಸ ತೆಗೆದುಕೊಳ್ಳುವ ಮುನ್ನ ಬ್ರಹ್ಮಚಾರಿಯಾಗಿದ್ದರೆ ತಂದೆ ತಾಯಿಯರ ಅನುಮತಿ ಪಡೆಯಬೇಕು. ಮದುವೆಯಾಗಿ ಗೃಹಸ್ಥನಾಗಿದ್ದರೆ ಹೆಂಡತಿಯ ಅನುಮತಿ ಪಡೆಯಬೇಕು. ವಿಶ್ವರೂಪರು ಅದೇ ಪ್ರಕಾರ ಹೆಂಡತಿಯ ಅನುಮತಿಗಾಗಿ ಕೋರಿದರು.

"ಭಾರತಿ, ಇನ್ನು ಮುಂದೆ ಈ ಗುರುಕುಲವನ್ನು ನೀನು ನಡೆಸಬೇಕಾಗುತ್ತದೆ. ಈ ಅಪಾರವಾದ ಐಶ್ವರ್ಯ, ದನಕರುಗಳು, ಶಿಷ್ಯ ಸಂಕುಲ ಇವೆಲ್ಲದರ ಹೊಣೆಯನ್ನು ನೀನು ನಿರ್ವಹಿಸಬೇಕಾಗುತ್ತದೆ" ಎಂದರು.

ಆಕೆ ನಮ್ರವಾಗಿ ಎಲ್ಲವನ್ನೂ ಕೇಳಿಕೊಂಡರು. "ಆರ್ಯ, ತಮಗೆ ವೈರಾಗ್ಯ ಮೂಡಿದೆ. ತಾವು ತಮ್ಮ ಗುರುವಿನೊಡನೆ ಹೋಗುತ್ತೀರಿ. ಈ ಐಶ್ವರ್ಯ ಧನಕನಕಗಳಿಂದ ನನಗೆ ಸುಖವಾಗುತ್ತದೆಯೇ ? ತಮಗೆ ಇವು ಸುಖಶಾಂತಿಯನ್ನು ಕೊಡಲಾರದೇ ಹೋದಲ್ಲಿ, ನನಗೆ ಇವು ಸುಖ ಶಾಂತಿಯನ್ನು ಕೊಡುತ್ತವೆಯೇ ? ನಾನೂ ಸಹ ತಮ್ಮಂತೆಯೇ ಎಲ್ಲವನ್ನೂ ಬಿಟ್ಟು ತಪಸ್ಸಿಗಾಗಿ ಹೊರಡುತ್ತೇನೆ" ಎಂದರು.

ಹೆಂಡತಿಯ ಮಾತು ಕೇಳಿ ವಿಶ್ವರೂಪರಿಗೆ ಆಶ್ಚರ್ಯವಾಯಿತು. "ಭಾರತಿ, ನಿನ್ನ ಮನಸ್ಸಿನಲ್ಲಿ ಏನಿದೆ ಎಂದು ನಾನು ಅರಿತೆ. ಹಾಗಾದರೆ ನಮ್ಮ ಐಶ್ವರ್ಯವನ್ನೆಲ್ಲಾ ದಾನ ಮಾಡಿ ಬಿಡೋಣ" ಎಂದರು.

ಆಕೆ "ಹಾಗೇ ಮಾಡಿರಿ. ನನ್ನದೇನೂ ಅಡ್ಡಿಯಿಲ್ಲ" ಎಂದರು.

ಮಾರನೆಯ ದಿನ ವಿಶ್ವರೂಪರು, ತಮ್ಮ ಶಿಷ್ಯರನ್ನೆಲ್ಲಾ ಕರೆದು ಹತ್ತಿರ ಕುಳ್ಳಿರಿಸಿಕೊಂಡರು. "ವಟುಗಳೇ, ಇಲ್ಲಿಯವರೆಗೂ ನೀವೆಲ್ಲರೂ ಈ ಗುರುಕುಲದಲ್ಲಿ ಪರಸ್ಪರ ಸ್ನೇಹ, ವಿಶ್ವಾಸದಿಂದ ನಡೆದುಕೊಂಡಿದ್ದೀರಿ. ನಾನು ಇವೆಲ್ಲವನ್ನೂ ಬಿಟ್ಟು,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯರೊಡನೆ ಹೋಗುವ ನಿರ್ಧಾರ ಮಾಡಿದ್ದೇನೆ. ಉಭಯ ಭಾರತಿಯೂ ತಪಸ್ಸಿಗಾಗಿ ತೆರಳುತ್ತಾರೆ" ಎಂದು ನುಡಿದು, ಕ್ಷಣಕಾಲ ಸುಮ್ಮನಾದರು. ಆ ಗುಂಪಿನಲ್ಲಿದ್ದವರೆಲ್ಲರಿಗೂ ತುಂಬಾ ವ್ಯಸನವಾಯಿತು. ಗುರುಗಳು ತಮ್ಮೆಲ್ಲರನ್ನೂ ಬಿಟ್ಟು ಹೊರಡುತ್ತಾರಲ್ಲಾ, ಎಂದು. ಚಿಕ್ಕ ಚಿಕ್ಕ ವಿದ್ಯಾರ್ಥಿಗಳಂತೂ ಕಣ್ಣಲ್ಲಿ ನೀರು ಉಕ್ಕುತ್ತಿರಲು, ಅತ್ತೇಬಿಟ್ಟರು.

ಅನಂತರ ವಿಶ್ವರೂಪರು "ಮಕ್ಕಳೇ, ನೀವು ಯಾರೂ ಇದಕ್ಕಾಗಿ ದುಃಖಿಸಬಾರದು. ನಿಮ್ಮಲ್ಲಿ ಹಿರಿಯರಾದವರು ಈ ಗುರುಕುಲವನ್ನು ನಡೆಸಿರಿ. ಈ ನಗರದಲ್ಲಿ ಇರುವ ದೊಡ್ಡ ವಿದ್ವಾಂಸರ ನೆರವನ್ನು ಪಡೆಯಿರಿ" ಎಂದು ಹೇಳಿ ಪ್ರತಿಯೊಬ್ಬರ ತಲೆಯನ್ನೂ ನೇವರಿಸಿ, ಆಶೀರ್ವಾದ ಮಾಡಿದರು.

ಒಂದೆರಡು ದಿನಗಳಲ್ಲೇ ವಿಶ್ವರೂಪರು ವಿಶ್ವಜಿತ್ ಎಂಬ ಯಜ್ಞ ನಡೆಸಲು ವ್ಯವಸ್ಥೆ ಮಾಡಿದರು. ಯಜ್ಞಕ್ಕಾಗಿ ನೂರಾರು ಜನ ಪಂಡಿತರನ್ನು ಆಹ್ವಾನಿಸಿದರು. ಆ ಯಜ್ಞವನ್ನು ನಡೆಸುವ ಸಂದರ್ಭದಲ್ಲಿಯೇ ತಮ್ಮ ಎಲ್ಲ ಐಶ್ವರ್ಯವನ್ನೂ ದಾನ ಮಾಡಿ ಬಿಟ್ಟರು. ವಿಶ್ವರೂಪರು ಅವರ ಪತ್ನಿಯು ತಮ್ಮ ಮೈಮೇಲೆ ಇದ್ದ ನಾರುಡಿ ವಿನಾ, ಉಳಿದುದೆಲ್ಲವನ್ನೂ ಇತರರಿಗೆ ದಾನ ಮಾಡಿ ಬಿಟ್ಟರು.

ಹೀಗೆ ಮಹಾ ವಿದ್ವಾಂಸರೂ, ಶ್ರೀಮಂತರೂ, ಕುಲಪತಿಯೂ ಆಗಿದ್ದ ವಿಶ್ವರೂಪರು, ಎಲ್ಲವನ್ನೂ ಬಿಟ್ಟು, ಶ್ರೀ ಶಂಕರರ ಮುಂದೆ ಬಂದು ನಿಂತು ಪ್ರಣಾಮ ಮಾಡಿದರು. "ಆಚಾರ್ಯ, ಇದೋ ತಮ್ಮಲ್ಲಿ ಆಶ್ರಯವನ್ನು ಕೋರಿ ಬಂದಿದ್ದೇನೆ. ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಅನುಗ್ರಹಿಸಿ" ಎಂದು ಪ್ರಾರ್ಥಿಸಿದರು. ಆಗ ಅವರಿಗೆ ಇನ್ನೂ ಚಿಕ್ಕ ವಯಸ್ಸು. ಶ್ರೀ ಶಂಕರರಿಗಿಂತ ಹತ್ತೆಂಟು ವರ್ಷ ದೊಡ್ಡವರು ಅಷ್ಟೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

10

ಆ ವೇಳೆಗೆ ಶ್ರೀ ಶಂಕರರಿಗೆ ಒಬ್ಬ ಶಿಷ್ಯರು ದೊರಕಿದ್ದರು. ಅವರೇ ಶ್ರೀ ಪದ್ಮಪಾದರು. ಆದರೆ ಶ್ರೀ ವಿಶ್ವರೂಪರಂತೆ ಅವರು ಪ್ರಸಿದ್ಧ ವಿದ್ವಾಂಸರಾಗಿರಲಿಲ್ಲ. ಕುಲಪತಿಯೂ ಆಗಿರಲಿಲ್ಲ. ಇಂತಹ ಶ್ರೇಷ್ಠ ಪಂಡಿತರು ತಮ್ಮ ಶಿಷ್ಯರಾಗಲು ಬಂದುದು ಶಂಕರರಿಗೆ ತುಂಬಾ ಸಂತೋಷವನ್ನು ಉಂಟುಮಾಡಿತು.

ಉಭಯ ಭಾರತೀ ದೇವಿಯು ಶಂಕರರಲ್ಲಿ ಬಂದು "ಯತಿ ರಾಜ, ತಾವು ವಿಶ್ವರೂಪರನ್ನು ಶಿಷ್ಯರನ್ನಾಗಿ ಮಾಡಿಕೊಂಡು, ಅನುಗ್ರಹಿಸುತ್ತಿದ್ದೀರಿ. ಇನ್ನು ನಾನು ಇಲ್ಲಿಂದ ಹೊರಡಲು ಅನುಮತಿ ಕೊಡಿ" ಎಂದು ಕೇಳಿದರು.

"ತಾಯಿ, ತಾವು ಎಲ್ಲಿಗೆ ಹೋಗುವ ಅಪೇಕ್ಷೆ ಹೊಂದಿದ್ದೀರಿ?"

"ಕಾಶ್ಮೀರದ ಶಾರದಾ ಮಂಡಲಕ್ಕೆ ಅಥವಾ ಹಿಮಾಲಯಕ್ಕೆ ಹೋಗುವ ಇಚ್ಛೆಯಿದೆ" ಎಂದರು ಆಕೆ.

ಶ್ರೀ ಶಂಕರರು "ತಾಯಿ, ತಾವು ಜ್ಞಾನಸಂಪನ್ನೆಯಾಗಿದ್ದೀರಿ. ತಾವು ಇದ್ದಲ್ಲಿ ವಿದ್ಯೆ, ಜ್ಞಾನ, ಶಾಂತಿಗಳು ನೆಲಸುತ್ತವೆ. ಆದ್ದರಿಂದ ತಾವು ದಯಮಾಡಿ ನನಗೆ ಸಹಾಯಮಾಡಬೇಕು" ಎಂದು ಕೋರಿ ಕೊಂಡರು.

ಉಭಯ ಭಾರತಿ ಮೌನವಾಗಿದ್ದರು.

"ತಾಯಿ ಈ ದೇಶದಲ್ಲಿ ಧರ್ಮ ಪ್ರಸಾರ ಮಾಡಲು ರಾಷ್ಟ್ರದ ನಾಲ್ಕು ಸ್ಥಳಗಳಲ್ಲಿ ಧರ್ಮಪೀಠಗಳನ್ನೂ ಮಠಗಳನ್ನೂ ಸ್ಥಾಪಿಸುವ ಉದ್ದೇಶ ಹೊಂದಿದ್ದೇನೆ. ತಾವು ಶೃಂಗೇರಿಗೆ ಬಂದು ಆ ಪೀಠದಲ್ಲಿಯೇ ನೆಲಸಿದ್ದು, ತಮ್ಮ ತಪಸ್ಸು ಅನುಷ್ಠಾನಗಳಲ್ಲಿ ನಿರತರಾಗಿರಬೇಕೆಂದೂ ಅಲ್ಲಿ ಕಲಿಯುವವರಿಗೆಲ್ಲಾ ಮಾರ್ಗದರ್ಶನ ಮಾಡಬೇಕೆಂದೂ ಪ್ರಾರ್ಥಿಸುತ್ತೇನೆ" ಎಂದು ವಿನ್ನವಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕೆ ಸ್ವಲ್ಪಕಾಲ ಮೌನವಾಗಿದ್ದು, "ಆಯಿತು, ತಾವು ಅಪೇಕ್ಷಿಸಿದಂತೆಯೇ ತಮ್ಮೊಡನೆ ಬರುತ್ತೇನೆ" ಎಂದು ವಚನವಿತ್ತರು.

ಆ ಬಳಿಕ ಉಭಯ ಭಾರತಿಯು ತಮ್ಮ ಪರಿಜನರನ್ನೂ, ಬಂಧು ಬಳಗವನ್ನೂ ಬಿಟ್ಟು ಊರಾಚೆಯಲ್ಲಿದ್ದ ವನವೊಂದಕ್ಕೆ ತೆರಳಿ, ಒಬ್ಬಿಬ್ಬರು ಪರಿಚಾರಿಕೆಯರೊಡನೆ ಅಲ್ಲಿಯೇ ಧ್ಯಾನ ತಪಸ್ಸುಗಳಲ್ಲಿ ಮಗ್ನರಾದರು.

ಶ್ರೀ ಶಂಕರಾಚಾರ್ಯರು ಶ್ರೀ ವಿಶ್ವರೂಪಾಚಾರ್ಯರನ್ನು ಕರೆದುಕೊಂಡು ನರ್ಮದಾತೀರಕ್ಕೆ ಬಂದರು. ಆ ದಿನ ರಾತ್ರಿ ಅವರೆಲ್ಲಾ ಶಾಸ್ತ್ರ ವಿಚಾರಗಳನ್ನೆಲ್ಲಾ ಮಾತನಾಡುತ್ತಾ ಕಳೆದರು. ಮಾರನೆಯ ದಿನ ಪ್ರಾತಃಕಾಲ, ನಸುಕಿನಲ್ಲಿಯೇ ಎದ್ದು ಸ್ನಾನಾದಿಗಳನ್ನು ತೀರಿಸಿಕೊಂಡರು. ಬಳಿಕ ಶ್ರೀ ಶಂಕರಾಚಾರ್ಯರು ವಿಶ್ವರೂಪಾಚಾರ್ಯರಿಗೆ ಸನ್ಯಾಸದೀಕ್ಷೆಯನ್ನು ಇತ್ತರು. ವಿಶ್ವರೂಪರು ಗೃಹಸ್ಥನ ಲಕ್ಷಣವಾಗಿದ್ದ ಜುಟ್ಟು, ಜನಿವಾರ, ಬಿಳಿಯ ಬಟ್ಟೆ ಇವುಗಳನ್ನು ತ್ಯಜಿಸಿ, ಕಾವಿಯ ವಸ್ತ್ರವನ್ನು ಉಟ್ಟರು. ದಂಡವನ್ನೂ ಕಮಂಡಲವನ್ನೂ ಧರಿಸಿದರು. ಅಂದಿನಿಂದ ಅವರ ಹೆಸರು ಶ್ರೀ ಸುರೇಶ್ವರಾಚಾರ್ಯ ಎಂದಾಯಿತು.

ಹೀಗೆ ಆಗರ್ಭ ಶ್ರೀಮಂತರೂ, ಮಹಾವಿದ್ವಾಂಸರೂ ಕುಲಪತಿಯೂ ಆಗಿದ್ದ ತರುಣ ಪಂಡಿತ, ಶ್ರೀ ವಿಶ್ವರೂಪಾಚಾರ್ಯರು ಶ್ರೀ ಸುರೇಶ್ವರಾಚಾರ್ಯರಾದರು. ಗುರುವು ಅವರನ್ನೇ ಹುಡುಕಿಕೊಂಡು ಬಂದು ಅವರನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ಇತಿಹಾಸದಲ್ಲಿ ಇದೊಂದು ಅಪೂರ್ವವಾದ ಪ್ರಸಂಗವಾಯಿತು.

ಶ್ರೀ ಶಂಕರಾಚಾರ್ಯರು ಸ್ವಲ್ಪ ದಿನದ ಮಟ್ಟಿಗೆ ಮಾಹಿಷ್ಮತಿಯ ಶಿವ ದೇವಾಲಯದಲ್ಲಿಯೇ ಇದ್ದರು. ಅನಂತರ ತಮ್ಮ ಇಬ್ಬರು ಸಂನ್ಯಾಸಿ ಶಿಷ್ಯರನ್ನೂ, ಅನೇಕ ಜನ ಬ್ರಹ್ಮಚಾರಿ ಶಿಷ್ಯರನ್ನೂ ಕರೆದುಕೊಂಡು, ಪ್ರವಾಸ ಆರಂಭಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri



ಶಂಕರರು ಪದ್ಮಪಾದಗೆ ಸಂನ್ಯಾಸ ದೀಕ್ಷೆಯನ್ನಿತ್ತರು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರರು ಪ್ರವಾಸ ಕಾಲದಲ್ಲಿಯೇ ಈ ಹೊಸ ಶಿಷ್ಯರಿಗೆ ದಿನವೂ ಬೆಳಿಗ್ಗೆ ಮತ್ತು ಸಂಜೆಯ ಕಾಲದಲ್ಲಿ ಬ್ರಹ್ಮಸೂತ್ರಗಳು, ಉಪನಿಷತ್ತುಗಳು ಮತ್ತು ಭಗವದ್ಗೀತೆ ಇವುಗಳ ಭಾಷ್ಯವನ್ನು ಪಾಠಮಾಡುತ್ತಿದ್ದರು. ಪಂಡಿತ ಶ್ರೇಷ್ಠರಾದ ಈ ಶಿಷ್ಯರು ಕೇಳುತ್ತಿದ್ದ ಪ್ರಶ್ನೆಗಳೆಲ್ಲಕ್ಕೂ ಸಮಾಧಾನಕರವಾದ ಉತ್ತರ ನೀಡುತ್ತಿದ್ದರು. ಅವರ ಅನುಮಾನಗಳೆಲ್ಲಕ್ಕೂ ಪರಿಹಾರ ಹೇಳುತ್ತಿದ್ದರು. ಸಂಶಯಗಳೆಲ್ಲವನ್ನೂ ತೃಪ್ತಿಕರವಾಗಿ ನಿವಾರಿಸುತ್ತಿದ್ದರು.

ಸುರೇಶ್ವರರಾದರೋ ತಮ್ಮ ಗುರುಗಳು ಹೇಳಿದ ಪಾಠವನ್ನು ತಾವು ಮತ್ತೆ ಮತ್ತೆ ಓದಿ, ಮನನ ಮಾಡುತ್ತಿದ್ದರು. ಅವುಗಳಲ್ಲಿ ತಮಗೆ ತೋರಿದ ಸಂಶಯಗಳನ್ನೆಲ್ಲಾ ಮಾರನೆಯ ದಿನ ಗುರುಗಳ ಮುಂದೆ ಬಿನ್ನವಿಸುತ್ತಿದ್ದರು. ಗುರುವಿನಿಂದ ಬಂದ ಉತ್ತರ ಸಮಾಧಾನಕರವಾಗಿರದಿದ್ದರೆ ಮತ್ತೆ ಮತ್ತೆ ಕೆದಕಿ ಪ್ರಶ್ನೆ ಕೇಳುತ್ತಿದ್ದರು. ಇದರಿಂದ ಸುರೇಶ್ವರರಿಗಷ್ಟೇ ಅಲ್ಲದೆ, ಶಂಕರಾಚಾರ್ಯರೊಡನೆ ಇದ್ದ ಬೇರೆಯ ಶಿಷ್ಯರಿಗೂ ಪ್ರಯೋಜನವಾಗುತ್ತಿತ್ತು. ಅವರ ಮನಸ್ಸುಗಳಲ್ಲಿಯೂ ಇಂತಹದೇ ಅನುಮಾನಗಳು ಬರುತ್ತಿದ್ದವು. ಅವರು ಸಂಕೋಚದಿಂದ ಸುಮ್ಮನಿರುತ್ತಿದ್ದರು. ಒಮ್ಮೊಮ್ಮೆ ಬೇರೆಯವರು ತಮ್ಮನ್ನು ದಡ್ಡನೆಂದು ಭಾವಿಸಿಯಾರು, ಎಂಬ ಭಾವನೆಯಿಂದ ಸುಮ್ಮನಿರುತ್ತಿದ್ದರು. ಸುರೇಶ್ವರರು ಈ ಎಲ್ಲ ಮುಗ್ಧ ಶಿಷ್ಯರ ಪರವಾಗಿ ಗುರುಗಳನ್ನು ತಾವೇ ಪ್ರಶ್ನಿಸಿ, ಪ್ರಶ್ನೆಗಳಿಗೆ ಎಲ್ಲರಿಗೂ ಸಮಾಧಾನಕರವಾದ ಉತ್ತರ ಸಿಕ್ಕುವಂತೆ ಮಾಡುತ್ತಿದ್ದರು.

ಹೀಗೆ ಕೇವಲ ಕೆಲವು ತಿಂಗಳುಗಳಲ್ಲಿಯೇ ಸುರೇಶ್ವರರು ತಮ್ಮ ಸಹಪಾಠಿಗಳ ಪ್ರೀತಿ ಗೌರವಕ್ಕೆ ಪಾತ್ರರಾದರು. ತಮ್ಮ ಗುರುಗಳ ವಾತ್ಸಲ್ಯ, ಅಭಿಮಾನಾದರಕ್ಕೂ ಪಾತ್ರರಾದರು.

ಮುಂದೆ ಶ್ರೀ ಶಂಕರರು ಭಾಷ್ಯವನ್ನು ಹೇಳುತ್ತಿದ್ದ ವಾದದ

CC-O. Sri Vidyabhaskara Book Corner, Bangalore.

 CC-O. In Public Domain. Digitized by eGangotri

ಗೋಷ್ಠಿಯಲ್ಲಿ ಗುರುಗಳ ಪರವಾಗಿ, ಸುರೇಶ್ವರರೇ ವಾದ ಮಾಡುತ್ತಿದ್ದರು. ಶಂಕರರು ಬೋಧಿಸುತ್ತಿದ್ದ ವೇದಾಂತ ತತ್ತ್ವವನ್ನು ಸರಳವಾಗಿ, ಸ್ಪಷ್ಟವಾಗಿ ನಿರೂಪಿಸುತ್ತಿದ್ದರು. ಬಹುಜನ ಪಂಡಿತರನ್ನೂ ಮೆಚ್ಚಿಸಿ, ತಮ್ಮ ಮಾರ್ಗಕ್ಕೆ ಆಕರ್ಷಿಸಿಕೊಂಡರು.

11

ಶ್ರೀ ಶಂಕರರು ದೇಶ ಸಂಚಾರ ಮಾಡುತ್ತಾ, ಕರ್ನಾಟಕಕ್ಕೆ ಬಂದರು. ಅಲ್ಲಿ ಇದ್ದ ಪಂಡಿತರನ್ನೆಲ್ಲಾ ತಮ್ಮ ಬೋಧನೆ ಉಪದೇಶಗಳಿಂದ ಒಲಿಸಿಕೊಂಡರು. ಶ್ರೀಬಲಿ ಎಂಬ ಗ್ರಾಮದಲ್ಲಿದ್ದ ಪ್ರಭಾಕರ ಭಟ್ಟ ಎಂಬ ವಿದ್ವಾಂಸರೂ ಶ್ರೀ ಶಂಕರರ ಉಪದೇಶದ ಪ್ರಭಾವಕ್ಕೆ ಸಿಕ್ಕಿದರು. ಅವರ ಮೂಗನಾದ ಮಗನನ್ನು ಶ್ರೀ ಶಂಕರರು ಅನುಗ್ರಹಿಸಿ ಮಾತನಾಡುವಂತೆ ಮಾಡಿದರು. ಆತನು ತುಂಬಾ ಜ್ಞಾನಿಯಾಗಿದ್ದ ಬಾಲಕ. ಸದಾ ದೇವರ ಧ್ಯಾನದಲ್ಲಿಯೇ ಇದ್ದು, ಮೂಗನಂತೆ ಮಾತನಾಡದೆ ಇದ್ದನು. ಎಲ್ಲರೂ ಆತನನ್ನು ಮೂಗನೆಂದೇ ಭಾವಿಸಿದ್ದರು. ಆದರೆ ಶಂಕರರಿಗೆ ಆತನು ಜ್ಞಾನಿಯೆಂಬುದು ಬೇಗನೇ ಅರಿವಾಯಿತು.

ಶ್ರೀ ಶಂಕರರ ದರ್ಶನವಾದಾಗ ಆತನು 'ಇವರೇ ನನ್ನ ಗುರು' ಎಂದು ಕಂಡುಕೊಂಡನು. ಪ್ರಭಾಕರ ಭಟ್ಟರೂ ತಮ್ಮ ಮಗನನ್ನು ಶಂಕರಾಚಾರ್ಯರಿಗೆ ಒಪ್ಪಿಸಿದರು. ಆ ಬಾಲಕನಿಗೆ ಶ್ರೀ ಶಂಕರರು ಸಂನ್ಯಾಸವನ್ನು ಕೊಟ್ಟು ಶ್ರೀ ಹಸ್ತಾಮಲಕಾಚಾರ್ಯ ಎಂಬ ಹೊಸ ಹೆಸರನ್ನು ಕೊಟ್ಟರು.

ಪದ್ಮಪಾದ, ಸುರೇಶ್ವರ ಮತ್ತು ಹಸ್ತಾಮಲಕರೊಡನೆಯೂ ಇತರ ಬ್ರಹ್ಮಚಾರಿ ಶಿಷ್ಯರೊಡನೆಯೂ ಶ್ರೀ ಶಂಕರರು ಶೃಂಗೇರಿಗೆ ಆಗಮಿಸಿದರು.

Sri Vidyabharathi Book Centre, Sringeri

CC-0. Mumukshu Bhawan Varanasi Collection. Public Domain. Digitized by eGangotri

ಶೃಂಗೇರಿಗೆ ಬಂದನಂತರ ಶ್ರೀ ಸುರೇಶ್ವರರು ವ್ಯಾಸಂಗದಲ್ಲಿ, ತಮ್ಮ ಗುರುಸೇವೆಯಲ್ಲಿ ನಿರತರಾದರು. ಶ್ರೀ ಶಂಕರರು ಕೊಡುತ್ತಿದ್ದ ಎಷ್ಟೋ ಉಪದೇಶಗಳನ್ನು ಓಲೆಗರಿಯಲ್ಲಿ ಬರೆದಿಡುತ್ತಿದ್ದರು. ಅದರಲ್ಲಿ ಇತರ ಶಿಷ್ಯರ ನೆರವನ್ನೂ ಪಡೆಯುತ್ತಿದ್ದರು.

ಶ್ರೀ ಶಂಕರರು ಶೃಂಗೇರಿಯಲ್ಲಿ ಆರೇಳು ವರ್ಷಗಳಿಗೂ ಹೆಚ್ಚು ಕಾಲ ಇದ್ದರು. ಅಲ್ಲಿಯೇ ಅವರು ತಮ್ಮ ಮೊದಲ ಮಠವನ್ನು ಸ್ಥಾಪಿಸಿದರು. ಆ ಮಠದಲ್ಲಿ ವೇದ ಮತ್ತು ಶಾಸ್ತ್ರ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿದರು. ದೂರ ದೂರದಿಂದ ಬಂದ ಅನೇಕ ಜನ ಬಾಲಕರು ಶೃಂಗೇರಿಯಲ್ಲಿಯೇ ಇದ್ದು ವ್ಯಾಸಂಗ ಮಾಡಲು ಅನುಕೂಲ ಕಲ್ಪಿಸಿದರು.

ಶ್ರೀ ಶಂಕರಾಚಾರ್ಯರು ಉಭಯ ಭಾರತೀ ದೇವಿಯನ್ನು ತಮ್ಮೊಡನೆ ಕರೆದುಕೊಂಡು ಬಂದಿದ್ದಾರಲ್ಲವೇ ? ಆಕೆಯ ತಪಸ್ಸು ಮತ್ತು ಪೂಜೆಗಳಿಗೆ ಅನುಕೂಲವಾಗುವಂತೆ, ಒಂದು ಕುಟೀರವನ್ನು ನೇಮಿಸಿದರು. ಪಾಠಶಾಲೆಯ ವಿದ್ಯಾರ್ಥಿಗಳು ಶ್ರೀ ಸುರೇಶ್ವರರಲ್ಲಿಯೂ, ಶ್ರೀ ಉಭಯ ಭಾರತಿಯಲ್ಲಿಯೂ ವ್ಯಾಸಂಗ ಮಾಡುತ್ತಿದ್ದರು.

ಶ್ರೀ ಸುರೇಶ್ವರರು ವಿದ್ಯಾರ್ಥಿಗಳಿಗೆ ಪಾಠ ಹೇಳುವ ಅನುಭವವಿದ್ದವರಲ್ಲವೆ ? ಮಾಹಿಷ್ಮತಿಯಲ್ಲಿ ಅವರದೇ ಒಂದು ದೊಡ್ಡ ಗುರುಕುಲವಿತ್ತಲ್ಲವೇ ? ಶೃಂಗೇರಿಯಲ್ಲಿಯೂ ವಿದ್ಯಾರ್ಥಿಗಳಿಗೆ ಪಾಠ ಹೇಳುವುದರಲ್ಲಿ ಅವರದೇ ಮೇಲುಗೈಯಾಯಿತು. ಸಣ್ಣ ಬಾಲಕರಿಂದ ಹಿಡಿದು, ಪ್ರೌಢವಿದ್ಯಾಭ್ಯಾಸಕ್ಕಾಗಿ ಬಂದವರ ವರೆಗೂ ಎಲ್ಲರಿಗೂ ಸುರೇಶ್ವರರೇ ಗುರುಗಳಾದರು.

ಸುರೇಶ್ವರರ ಪ್ರತಿಭೆಯನ್ನು ಬಹುಬೇಗ ಕಂಡುಕೊಂಡ ಶಂಕರರು ಅವರಲ್ಲಿ ವಿಶೇಷ ವಿಶ್ವಾಸ ತೋರಿಸಿದರು. ತಾವು ಬರೆ

CC-O. In Public Domain. Digitized by eGangotri

ದಿದ್ದ ಬ್ರಹ್ಮಸೂತ್ರಗಳ ಭಾಷ್ಯಕ್ಕೆ, ವಿವರವಾದ ಟೀಕೆಯನ್ನು ಬರೆಯುವಂತೆ ಶಂಕರರು ಸುರೇಶ್ವರರಿಗೆ ಸೂಚನೆಯಿತ್ತರು.

ಆರಂಭದಿಂದಲೂ ಸುರೇಶ್ವರರ ವಿಚಾರದಲ್ಲಿ ಕೆಲವು ಜನ ಸಹಪಾಠಿಗಳಿಗೆ ಅಸೂಯೆಯಿತ್ತು, ಸುರೇಶ್ವರರು ದಿಟವಾಗಿಯೂ ಶ್ರೀ ಶಂಕರರು ಬೋಧಿಸುತ್ತಿರುವ ಅದ್ವೈತ ತತ್ತ್ವವನ್ನು ಅರಿತಿದ್ದಾರೆಯೇ ಎಂಬ ಬಗ್ಗೆ ಅನುಮಾನವಿತ್ತು. ಶಂಕರರು ಸುರೇಶ್ವರರನ್ನು ಪುಸ್ತಕ ಬರೆಯಲು ನೇಮಿಸಿದ್ದು, ಆ ಶಿಷ್ಯರಿಗೆ ಸರಿದೋರಲಿಲ್ಲ.

ಅವರು "ಗುರುಗಳೇ, ತಾವು ಸುರೇಶ್ವರರನ್ನು ಬ್ರಹ್ಮಸೂತ್ರ ಗ್ರಂಥದ ಮೇಲೆ ವಾರ್ತಿಕವನ್ನು ಬರೆಯಲು ಹೇಳಿದ್ದು ನಮಗೆ ಸರಿ ಕಾಣುತ್ತಿಲ್ಲ" ಎಂದರು.

ಶಂಕರಾಚಾರ್ಯರಿಗೆ ಆಶ್ಚರ್ಯವಾಯಿತು. ತಮ್ಮ ಶಿಷ್ಯರಲ್ಲೇ ಭಿನ್ನಾಭಿಪ್ರಾಯವಿದೆಯಲ್ಲಾ ಎಂದು ವಿಸ್ಮಯವಾಯಿತು.

"ಏನಪ್ಪಾ" ಎಂದರು.

"ಸುರೇಶ್ವರರು ತಮ್ಮಲ್ಲಿ ಶಿಷ್ಯರಾಗಿ ಬಂದು ಆರೇಳು ವರ್ಷಗಳಾದುವು. ಅಷ್ಟು ಅಲ್ಪ ಕಾಲದಲ್ಲೇ ಅವರು ತಮ್ಮ ಸಿದ್ಧಾಂತವನ್ನು ಅರ್ಥ ಮಾಡಿಕೊಂಡಿದ್ದಾರೆಂದು ಹೇಳುವುದು ಕಷ್ಟ" ಎಂದರು.

ಆಚಾರ್ಯರು "ಹೇಗೆ ಹೇಳುತ್ತೀರಿ ?"

"ಅವರು ಮೊದಲು ಕರ್ಮವಾದಿಗಳಾಗಿದ್ದವರು. ಕರ್ಮವೇ ಶ್ರೇಷ್ಠ ಎಂದು ವಾದಿಸುತ್ತಿದ್ದವರು. ಜ್ಞಾನವೇ ಶ್ರೇಷ್ಠ ಎಂದು ಅವರು ದೃಢವಾಗಿ ನಂಬಿದ್ದಾರೆ ಎಂಬುದಕ್ಕೆ ರುಜುವಾತು ಇಲ್ಲವಲ್ಲಾ" ಎಂದರು.

ಶಂಕರಾಚಾರ್ಯರಿಗೆ ತಮ್ಮ ಶಿಷ್ಯರ ಮನಸ್ಸಿನಲ್ಲಿರುವುದು ಏನೆಂದು ಅರ್ಥವಾಯಿತು. ತಮ್ಮ ಶಿಷ್ಯರಲ್ಲಿ ಪರಸ್ಪರ ಅಸೂಯೆ,

Sri Vidyabharathi Book Centre, Sringeri

CC-0. Mumukshu Bhawan Varanasi Collection. Public Domain. Digitized by eGangotri

ಅನುಮಾನವಿದ್ದುದನ್ನು ಕಂಡು ಅವರು ತುಂಬಾ ನೊಂದರು. ಅವರ ಮನಸ್ಸಿನಲ್ಲಿ ಇದ್ದುದನ್ನು ಅರಿಯಬೇಕೆಂಬ ಅಪೇಕ್ಷೆಯಿಂದ, "ಅಪ್ಪಾ, ಹಾಗಾದರೆ ಈ ಕೆಲಸವನ್ನು ಬೇರೆ ಯಾರಿಗೆ ವಹಿಸೋಣ" ಎಂದು ಕೇಳಿದರು.

ಕೂಡಲೇ ಆ ಶಿಷ್ಯರು "ಗುರುದೇವ ಶ್ರೀ ಪದ್ಮಪಾದರು ತಮ್ಮಲ್ಲಿ ಹತ್ತು ಹನ್ನೆರಡು ವರ್ಷಕ್ಕೂ ಹೆಚ್ಚು ಕಾಲ ಓದಿದ್ದಾರೆ. ಅವರೇ ಅದನ್ನು ಬರೆಯಲು ಸಮರ್ಥರು ಎಂದು ನಮ್ಮ ಭಾವನೆ" ಎಂದರು.

ಆಚಾರ್ಯರು ಆಗ ಏನನ್ನೂ ಹೇಳಲಿಲ್ಲ.

ಸ್ವಲ್ಪ ದಿನಗಳ ನಂತರ, ಶಿಷ್ಯರೆಲ್ಲಾ ಕಲೆತು ಮಾತನಾಡುತ್ತಿದ್ದಾಗ ಅವರನ್ನೆಲ್ಲಾ ಕರೆದರು. ಸುರೇಶ್ವರರತ್ತ ತಿರುಗಿ, "ನೀವು ಅದ್ವೈತ ತತ್ತ್ವವನ್ನು ಕುರಿತ ಒಂದು ಪುಟ್ಟ ಗ್ರಂಥವನ್ನು ರಚಿಸಿರಿ" ಎಂದು ಅಪ್ಪಣೆ ಮಾಡಿದರು. ಗುರುಗಳ ಅಪ್ಪಣೆಯಂತೆ ಹಲವು ದಿನಗಳಲ್ಲಿಯೇ ಸುರೇಶ್ವರರು 'ನೈಷ್ಕರ್ಮ್ಯಸಿದ್ಧಿ' ಎಂಬ ಗ್ರಂಥವನ್ನು ಬರೆದರು. ಈ ಗ್ರಂಥವು ವೇದಾಂತದ ಸಾರಸಂಗ್ರಹವಾಗಿದೆ. ಆ ಗ್ರಂಥವನ್ನು ಕುರಿತು ಹಲವಾರು ಜನ ವಿದ್ವಾಂಸರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಆ ಗ್ರಂಥದಿಂದ ಸುರೇಶ್ವರಾಚಾರ್ಯರ ಬಗ್ಗೆ ಇತರ ಶಿಷ್ಯರಿಗೆ ಇದ್ದ ಅನುಮಾನ ಪರಿಹಾರವಾಯಿತು. ಗೌರವಭಾವ ಮೂಡಿತು.

ಶ್ರೀ ಶಂಕರಾಚಾರ್ಯರು ಶೃಂಗೇರಿಯಿಂದ ತಮ್ಮ ತಾಯಿಯವರ ದರ್ಶನಕ್ಕಾಗಿ ಕಾಲಟಿಗೆ ಹೊರಟಿದ್ದರಷ್ಟೆ. ಆ ಕಾಲದಲ್ಲಿ ಶೃಂಗೇರಿಯ ಪಾಠಶಾಲೆ ಮಠಗಳ ಮೇಲ್ವಿಚಾರಣೆಯನ್ನು ಸುರೇಶ್ವರಾಚಾರ್ಯರೇ ನೋಡಿಕೊಳ್ಳುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

12

ಶ್ರೀ ಸುರೇಶ್ವರಾಚಾರ್ಯರು ಬಹಳ ದೊಡ್ಡ ಪಂಡಿತರೆಂದು ಪ್ರಸಿದ್ಧರಾಗಿದ್ದಾರೆಯಲ್ಲವೇ ? ಅವರು ಇನ್ನೂ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಪಂಚೀಕರಣ ವಾರ್ತಿಕಾ ಎಂಬ ಪುಸ್ತಕವು ಶ್ರೀ ಶಂಕರಾಚಾರ್ಯರ 'ಪಂಚೀಕರಣಂ' ಎಂಬ ಪುಸ್ತಕದ ವ್ಯಾಖ್ಯಾನ. ಅದರಲ್ಲಿ ಈ ಪ್ರಪಂಚ ಸೃಷ್ಟಿಯಾದ ವಿಧಾನವನ್ನು ಸುರೇಶ್ವರಾಚಾರ್ಯರು ವಿವರಿಸಿದ್ದಾರೆ.

ಶ್ರೀ ಶಂಕರಾಚಾರ್ಯರು ಬರೆದಿರುವ ಉಪನಿಷತ್ತಿನ ಭಾಷ್ಯಗಳಲ್ಲಿ ಎರಡು ಭಾಷ್ಯಗಳಿಗೆ ಸುರೇಶ್ವರರು ವ್ಯಾಖ್ಯಾನ ಬರೆದಿದ್ದಾರೆ. ತೈತಿರೇಯೋಪನಿಷತ್ತು ಮತ್ತು ಬೃಹದಾರಣ್ಯಕೋಪನಿಷತ್ತುಗಳ ಭಾಷ್ಯದ ಮೇಲೆ ಸುರೇಶ್ವರರು ಬರೆದ ವ್ಯಾಖ್ಯಾನಗಳು ತುಂಬಾ ಶ್ರೇಷ್ಠವಾಗಿವೆ. ವಿದ್ವಾಂಸರ ಮನ್ನಣೆಯನ್ನೂ ಮೆಚ್ಚುಗೆಯನ್ನೂ ಪಡೆದಿವೆ. ಬೃಹದಾರಣ್ಯಕೋಪನಿಷತ್ತಿನ ವ್ಯಾಖ್ಯಾನವೇ ಸುಮಾರು ಹನ್ನೊಂದು ಸಾವಿರ ಶ್ಲೋಕಗಳಿದ್ದು, ಬಹಳ ಪ್ರಸಿದ್ಧವಾಗಿದೆ. ಅದಕ್ಕೆ 'ಅದ್ವೈತ ತತ್ತ್ವಜ್ಞಾನದ ವಿಶ್ವಕೋಶ' ಎಂಬ ಹೆಸರೂ ಇದೆ.

ಶ್ರೀ ಶಂಕರಾಚಾರ್ಯರು ಬರೆದಿರುವ ದಕ್ಷಿಣಾಮೂರ್ತಿ ಸ್ತೋತ್ರದ ಮೇಲೂ ಸುರೇಶ್ವರರು ವ್ಯಾಖ್ಯಾನ ಬರೆದಿದ್ದಾರೆ. ಅದರ ಹೆಸರು 'ಮಾನಸೋಲ್ಲಾಸ' ಎಂದು. ಶ್ರೀ ಶಂಕರಾಚಾರ್ಯರು ಬೋಧಿಸಿದ ಅದ್ವೈತ ತತ್ತ್ವವನ್ನು ಅದರಲ್ಲಿ ಸರಳವಾಗಿ ಸುಲಭವಾಗಿ ಸುರೇಶ್ವರರು ನಿರೂಪಿಸಿದ್ದಾರೆ.

CC-0. In Public Domain. Digitized by eGangotri

13

ಶ್ರೀ ಶಂಕರಾಚಾರ್ಯರು ಶೃಂಗೇರಿಯಿಂದ ಕಾಲಟಿಗೆ ಹೋಗಿ ತಾಯಿಯವರ ಅಂತ್ಯಕಾಲದಲ್ಲಿ ಹತ್ತಿರವೇ ಇದ್ದು ಸೇವೆ ಮಾಡಿದರು. ತಾಯಿಯವರು ಮೃತರಾದ ಬಳಿಕ ಅವರ ಅಂತ್ಯಕರ್ಮಗಳನ್ನು ನೆರವೇರಿಸಿ, ಆ ನಂತರ ಶೃಂಗೇರಿಗೆ ಹಿಂದಿರುಗಿದರು.

ಆ ವೇಳೆಗೆ ಶಂಕರರು ಅಪೇಕ್ಷಿಸಿದಂತೆ ಗ್ರಂಥಗಳ ರಚನಾ ಕಾರ್ಯ ಮುಗಿದಿತ್ತು. ಅವರು ಶೃಂಗೇರಿಯಿಂದ ಮುಂದಕ್ಕೆ ದಿಗ್ವಿಜಯ ಹೊರಡಲು ನಿಶ್ಚಯಿಸಿದರು. ತಾವು ಸ್ಥಾಪಿಸಿದ್ದ ಶೃಂಗೇರಿಯ ಪೀಠಕ್ಕೆ ಅವರು ಸುರೇಶ್ವರರನ್ನು ಅಧ್ಯಕ್ಷರನ್ನಾಗಿ ನೇಮಿಸಿ, ಮಠದ ಮತ್ತು ಪಾಠಶಾಲೆಯ ಪೂರ್ಣ ಹೊಣೆಯನ್ನು ಸುರೇಶ್ವರರಿಗೆ ವಹಿಸಿದರು.

ಅನಂತರ ಶೃಂಗೇರಿಯಿಂದ ಹೊರಟರು.

ತಮ್ಮ ಎಲ್ಲ ಶಿಷ್ಯರನ್ನೂ ಕೂಡಿಕೊಂಡು ಆಚಾರ್ಯರು ಪುನಃ ಸಂಚಾರವನ್ನು ಪ್ರಾರಂಭಿಸಿದರು. ಸುರೇಶ್ವರರೂ ಆಚಾರ್ಯರೊಡನೆ ಹೊರಟರು. ದಕ್ಷಿಣದಲ್ಲಿ ರಾಮೇಶ್ವರದವರೆಗೆ ಸಂಚರಿಸಿದರು. ಮತ್ತೆ ಉತ್ತರಕ್ಕೆ ದಿಗ್ವಿಜಯ ಹೊರಟರು. ಎಲ್ಲ ಕಡೆಯಲ್ಲಿಯೂ ಸತ್ಯ, ಧರ್ಮ, ನ್ಯಾಯ ಮುಂತಾದುವನ್ನು ಬೋಧಿಸುತ್ತ ಹೊರಟರು. ಪೂರ್ವದಲ್ಲಿ ಪುರಿ, ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರೀ ಕ್ಷೇತ್ರಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಿದರು. ಕಾಶ್ಮೀರಕ್ಕೆ ದಯಮಾಡಿಸಿ ಅಲ್ಲಿ ಸರ್ವಜ್ಞ ಪೀಠವನ್ನು ಏರಿದರು. ಆ ಬಳಿಕ ಕೇದಾರನಾಥಕ್ಕೆ ಹೋಗಿ ಅಲ್ಲಿಂದ ಹಿಮಾಲಯ ಪರ್ವತದಲ್ಲಿ ಗುಹೆಯನ್ನು ಪ್ರವೇಶಿಸಲು ನಿರ್ಧರಿಸಿದರು.

ಶ್ರೀ ಶಂಕರರ ಮೂರನೆಯ ಈ ದೇಶ ಪರ್ಯಟನದಲ್ಲಿ ಸುರೇಶ್ವರರೂ ಇದ್ದರು. ಪುರಿ, ದ್ವಾರಕಾ ಮತ್ತು ಬದರೀ ಮಠಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥಾಪನೆಯಲ್ಲಿ ಶಂಕರರಿಗೆ ಸಹಾಯಕರಾಗಿಯೂ ಇದ್ದರು. ಶ್ರೀ ಶಂಕರರ ನಿರ್ವಾಣದ ನಂತರ ಸುರೇಶ್ವರರು ತಮ್ಮ ಶಿಷ್ಯರೊಡನೆ ಶೃಂಗೇರಿಗೆ ಹಿಂದಿರುಗಿದರು.

14

ಸುರೇಶ್ವರರು ಶೃಂಗೇರಿಯಲ್ಲಿ ಎಪ್ಪತ್ತು ವರ್ಷಕ್ಕೂ ಹೆಚ್ಚು ಕಾಲ ಇದ್ದರು. ಅವರ ತಪಸ್ಸು, ವಿದ್ವತ್ತು ಇವುಗಳಿಂದ ಬಹುಜನ ಆಕರ್ಷಿತರಾಗಿ ಬಂದರು. ಹಾಗೆ ಬಂದವರಲ್ಲಿ ಉತ್ತರ ಭಾರತದವರೂ ಇದ್ದರು. ದಕ್ಷಿಣ ಭಾರತದವರೂ ಇದ್ದರು.

ತಮ್ಮಲ್ಲಿ ವಿದ್ಯೆಯನ್ನು ಅಪೇಕ್ಷಿಸಿ ಬಂದವರನ್ನು ಸುರೇಶ್ವರರು ವಾತ್ಸಲ್ಯದಿಂದ ಕಂಡರು, ಪ್ರೀತಿಯಿಂದ ಕಂಡರು, ಅವರಿಗೆಲ್ಲಾ ಸ್ವತಃ ಪಾಠ ಹೇಳಿದರು. ಅವರ ಶಿಷ್ಯರು ದೇಶವನ್ನೆಲ್ಲಾ ಸಂಚರಿಸಿ ಅದ್ವೈತ ತತ್ತ್ವ ಪ್ರಚಾರ ಮಾಡಿದರು.

ಸುರೇಶ್ವರರು ತಮ್ಮ ಶಿಷ್ಯರಲ್ಲಿ ಪ್ರಮುಖರಾಗಿದ್ದ ಬ್ರಹ್ಮಚಾರಿಯೊಬ್ಬಾತನಿಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟು ಶ್ರೀನಿತ್ಯ ಬೋಧಘನಾಚಾರ್ಯ ಎಂಬ ಸಂನ್ಯಾಸ ನಾಮವನ್ನಿತ್ತರು. ಅನಂತರ ತಾವು ಎಲ್ಲಾ ವ್ಯವಹಾರವನ್ನು ನಿಲ್ಲಿಸಿ, ಸದಾ ಧ್ಯಾನನಿರತರಾಗಿದ್ದರು.

ಶ್ರೀ ಸುರೇಶ್ವರರು ತಮ್ಮ ಮುಪ್ಪಿನ ವಯಸ್ಸಿನಲ್ಲಿ, ಶಾಂತಿಯಿಂದ ಸಮಾಧಾನದಿಂದ ಮುಕ್ತರಾದರು.

CC-0. In Public Domain. Digitized by eGangotri

15

ಶೃಂಗೇರಿಯ ಶ್ರೀ ಶಾರದಾ ದೇವಾಲಯವನ್ನು ನೀವೆಲ್ಲಾ ನೋಡಿದ್ದೀರಲ್ಲವೇ ? ಅದರ ಬಲಗಡೆಗೆ ಇರುವ ಪುಟ್ಟದಾದ ಶಿಲೆಯ ಗುಡಿಯೇ ಶ್ರೀ ಸುರೇಶ್ವರಾಚಾರ್ಯರ ಸಮಾಧಿ. ಮೊದಲು ಆ ಸ್ಥಳದಲ್ಲಿ ಒಲು ಪುಟ್ಟದಾದ ಗುಡಿಯಿತ್ತು. ಸಮಾಧಿಯ ಮೇಲೆ ಶಿವಲಿಂಗವು ಪ್ರತಿಷ್ಠಿಸಲ್ಪಟ್ಟಿತ್ತು. ಇತ್ತೀಚೆಗೆ ಈಗಿನ ಜಗದ್ಗುರುಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರು, ಪುಟ್ಟ ಗುಡಿಯನ್ನು ವಿಸ್ತರಿಸಿದರು. ಶಿವಲಿಂಗದ ಹಿಂಭಾಗದಲ್ಲಿ ಸುಂದರವಾದ ಅಮೃತಶಿಲೆಯ ವಿಗ್ರಹವನ್ನು ಸ್ಥಾಪಿಸಿದರು.

ಸುರೇಶ್ವರರು ಉತ್ತರ ಭಾರತದಿಂದ ಬಂದವರಲ್ಲವೇ ? ಅವರ ನೆನಪಿಗಾಗಿ ಅಲ್ಲಿಯ ಜನ, ದರ್ಭಾಂಗಾ ಎಂಬಲ್ಲಿ ಒಂದು ವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಆಲ್ಲಿ ಆಧುನಿಕ ವಿದ್ಯಾಭ್ಯಾಸಕ್ಕೂ ಅನುಕೂಲ ಕಲ್ಪಿಸಿದ್ದಾರೆ. ಅದನ್ನು 'ಭಾರತೀ ಮಂಡನ ವಿದ್ಯಾಲಯ' ಎಂಬ ಹೆಸರಿನಿಂದಲೇ ಕರೆಯುತ್ತಿದ್ದಾರೆ.

ಸುರೇಶ್ವರರು ಶ್ರೀ ಶಂಕರಾಚಾರ್ಯರನ್ನು ಅನುಸರಿಸಿ ಬಂದಾಗ, ಸುರೇಶ್ವರರ ಹಲವಾರು ಜನ ಶಿಷ್ಯರೂ ಅವರೊಡನೆ ಬಂದರು. ಅವರೆಲ್ಲಾ ಕರ್ನಾಟಕದಲ್ಲಿಯೇ ನೆಲಸಿದರು. ಇಲ್ಲಿಯ ಜನರೊಡನೆ, ಅವರ ಕಷ್ಟ ಸುಖಗಳಲ್ಲಿ ಪಾಲ್ಗೊಂಡು, ಅವರೆಲ್ಲಾ ಕನ್ನಡಿಗರೇ ಆದರು. ಇಂದಿಗೂ ಅವರ ಪೀಳಿಗೆಯ ಜನ, ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿಯೂ ಇತರ ಕಡೆಗಳಲ್ಲಿಯೂ ಇದ್ದಾರೆ.

ಸುರೇಶ್ವರರು ಸಂಸ್ಕೃತ ಭಾಷೆಯಲ್ಲಿ ಬರೆದ ಎಲ್ಲ ಗ್ರಂಥಗಳೂ, ಭಾರತದ ಬಹು ಭಾಷೆಗಳಿಗೆ ಅನುವಾದವಾಗಿವೆ. ಕನ್ನಡದಲ್ಲಿಯೂ ಅವು ಅನುವಾದಿಸಲ್ಪಟ್ಟಿವೆ. ಈ ಗ್ರಂಥಗಳು ಶ್ರೀ ಶಂಕ

Sri Vidyabharathi Book Centre, Sringeri

CC-O. In Public Domain. Digitized by eGangotri



ಶೃಂಗೇರಿ ಶ್ರೀ ಶಾರದಾಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿಯಲ್ಲಿರುವ ಶ್ರೀ ಶಂಕರಾಚಾರ್ಯರ ಪುರಾತನ ಮೂರ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಚಾರ್ಯರ ಗ್ರಂಥಗಳಂತೆಯೇ, ವಿದ್ವಾಂಸರ ಮನ್ನಣೆಗೆ ಪಾತ್ರವಾಗಿವೆ.

ಶ್ರೀ ಶಂಕರರು 1300 ವರ್ಷಗಳಷ್ಟು ಹಿಂದೆಯೇ ಭರತ ಖಂಡವೆಲ್ಲಾ ಒಂದು ರಾಷ್ಟ್ರ ಎಂಬ ಕನಸನ್ನು ಕಂಡಿದ್ದರು. ಆ ಕನಸನ್ನು ನನಸು ಮಾಡಲು ಅವರು ದೇಶವನ್ನೆಲ್ಲಾ ಮೂರು ಸಲ ಸುತ್ತಿದರು. ಸಾವಿರಾರು ಜನ ಪಂಡಿತರೊಡನೆ, ವಿದ್ವಾಂಸರೊಡನೆ ಚರ್ಚೆ ಮಾಡಿದ್ದರು. ಸನಾತನ ವೈದಿಕ ಧರ್ಮದ ಏಳಿಗೆಗಾಗಿ ಶ್ರಮಪಟ್ಟರು. ಜನಗಳಲ್ಲಿ ಇದ್ದ ಭೇದ ಭಾವವನ್ನು ನಿವಾರಿಸಿದರು. ಯಾರು ಎಲ್ಲೇ ಇರಲಿ ಅವರು ಭಾರತೀಯರೇ ಎಂಬುದನ್ನು ಮನಗಾಣಿಸಿದರು. ವೇದಗಳು, ಶಾಸ್ತ್ರಗಳು ಇವು ಭಾರತೀಯರ ಅಮೂಲ್ಯವಾದ ಆಸ್ತಿ. ಅವುಗಳನ್ನು ರಚಿಸಲು, ಜನಗಳಲ್ಲಿ ಧಾರ್ಮಿಕ ಏಕತೆಯನ್ನು ಮೂಡಿಸಲು ಮಠಗಳನ್ನು ಸ್ಥಾಪಿಸಿದರು. ತಮ್ಮ ಉದ್ದೇಶವು ಸಫಲವಾಗುವಂತೆ ಮಾಡಲು, ಅವರು ಸಮರ್ಥರಾದ ಶಿಷ್ಯರ ತಂಡವನ್ನೇ ಕಟ್ಟಿದರು.

ಶ್ರೀ ಸುರೇಶ್ವರಾಚಾರ್ಯರು ಶ್ರೀ ಶಂಕರರ ಶಿಷ್ಯರಲ್ಲಿ ಅಗ್ರಗಣ್ಯರೆನಿಸಿ, ಅವರ ಸಂದೇಶವು ಸಂತತವಾಗಿ ಭಾರತೀಯರ ಹೃದಯವನ್ನು ಮುಟ್ಟುತ್ತಿರುವಂತೆ ಶ್ರಮಿಸಿದರು. ಶೃಂಗೇರಿಯ ಶ್ರೀ ಶಾರದಾಪೀಠವನ್ನು, ವಿದ್ಯಾ ದೇವತೆಯಾದ ಶ್ರೀ ಸರಸ್ವತಿಯ ನೆಲೆವೀಡನ್ನಾಗಿ ಮಾಡಿದರು.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabhinavathi Book Centre, Sringeri